# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಭಾನುವಾರ, ಮಾರ್ಚ್ 2, 2025

ಸಂಪುಟ : 51 ಸಂಚಿಕೆ : 289 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




# ಉಕ್ಕಡಗಾತ್ರಿ ಅಜ್ಜಯ್ಯನ ಮಹಾರಥೋತ್ಸವಕ್ಕೆ ಜನಸಾಗರ



ಮಲೇಬೆನ್ನೂರು, ಮಾ.1- ದಕ್ಷಿಣ ಭಾರತದ ಕಾಶಿ ಕ್ಷೇತ್ರವೆನಿಸಿರುವ ಮತ್ತು ಪವಾಡಗಳ ಪುಣ್ಯಭೂಮಿಯಾಗಿರುವ ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಮಹಾರಥೋತ್ಸವವು ಇಂದು ಬೆಳಿಗ್ಗೆ ಜನಸಾಗರದ ನಡುವೆ ವಿಜೃಂಭಣೆಯಿಂದ ನಡೆಯಿತು.

ರಥದಲ್ಲಿ ಅಜ್ಜಯ್ಯನ ಶಿಲಾಮೂರ್ತಿಯನ್ನು ಪ್ರತಿಷ್ಠಾಪಿಸಿದ ನಂತರ ನಂದಿಗುಡಿ ಬೃಹನ್ಮಠದ ಶ್ರೀ ನಂದೀಶ್ವರ ಶಿವಾಚಾರ್ಯ ಸ್ವಾಮೀಜಿ ರಥಕ್ಕೆ ಪೂಜೆ ಸಲ್ಲಿಸಿ, ರಥೋತ್ಸವಕ್ಕೆ ಚಾಲನೆ ನೀಡಿದರು.

ಈ ವೇಳೆ ನೆರೆದಿದ್ದ ಸಾವಿರಾರು ಭಕ್ತರು ಅಜ್ಜಯ್ಯ... ಅಜ್ಜಯ್ಯ... ಎಂಬ ಜಯಘೋಷಗಳೊಂದಿಗೆ ರಥವನ್ನು ಎಳೆದು ಸಂಭ್ರಮಿಸಿದರು.

ರಥೋತ್ಸವದ ಸಂದರ್ಭದಲ್ಲಿ ಭಕ್ತರು ರಥದ ಮೇಲೆ ಮಂಡಕ್ಕಿ - ಮೆಣಸಿನಕಾಳು, ಜೋಳ ಮತ್ತು ಬಾಳೆಹಣ್ಣುಗಳನ್ನು ಎಸೆದು ಭಕ್ತಿ ಸಮರ್ಪಿಸಿದರು.

ಕರ್ನಾಟಕದ ಹಲವಾರು ಜಿಲ್ಲೆಗಳು ಸೇರಿದಂತೆ ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ ರಾಜ್ಯಗಳಿಂದಲೂ ಬಂದ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು. ರಥೋತ್ಸವದ ವೇಳೆ ಅಪಾರ ಜನ ಭಾಗವಹಿಸಿದ್ದರಿಂದ ಕೆಲ ಕಾಲ ನೂಕು - ನುಗ್ಗಲು ಉಂಟಾಯಿತು. ಜನರನ್ನು ನಿಯಂತ್ರಿಸಲು ಪೊಲೀಸರು ಮತ್ತು ದೇವಸ್ಥಾನದ ಟ್ರಸ್ಟ್ ಸಮಿತಿ ಹಾಗೂ ಸ್ವಯಂ ಸೇವಕರು ಹರಸಾಹಸ ಪಟ್ಟರು.

**ಪುಣ್ಯ ಸ್ನಾನ :** ಒಂದು ವಾರ ಕಾಲ ನಡೆಯುವ ಅಜ್ಜಯ್ಯನ ಮಹಾಶಿವರಾತ್ರಿ ಜಾತ್ರಾ ಮಹೋತ್ಸವಕ್ಕೆ ಆಗಮಿಸುತ್ತಿರುವ ಭಕ್ತರು, ತುಂಗಭದ್ರಾ ನದಿಯಲ್ಲಿ ಪುಣ್ಯಸ್ನಾನ ಮಾಡಿ, ಅಜ್ಜಯ್ಯನ ಗದ್ದಿಗೆ ದರ್ಶನ ಪಡೆದರು.

ಅನೇಕರು ನದಿ ದಡದಲ್ಲೇ ಅಡುಗೆ ಮಾಡಿ, ಗಂಗೆ ಪೂಜೆ ಸಲ್ಲಿಸಿ, ಅಜ್ಜಯ್ಯನಿಗೆ ಎಡೆ ಮಾಡುತ್ತಿರುವುದು ಗಮನ ಸೆಳೆಯಿತು.

ನದಿಯಲ್ಲಿ ನೀರಿನ ಹರಿವು ಬಹಳ ಕಡಿಮೆ ಇದ್ದ ಕಾರಣ ಜನರು ನದಿಯ ನಡುಗಡ್ಡೆಯಲ್ಲಿ ಬಿಡಾರ ಹಾಕಿ ಅಲ್ಲಿಯೇ ತಂಗಿದ್ದರು. ದೇವಸ್ಥಾನದ ಕಲ್ಯಾಣ ಮಂಟಪಗಳು ಮತ್ತು ಎಲ್ಲಾ ವಸತಿ ಗೃಹಗಳು ಭರ್ತಿಯಾಗಿದ್ದರಿಂದ ಭಕ್ತರು ಗ್ರಾಮದ ಹೊರ ವಲಯದಲ್ಲಿರುವ ತೋಟಗಳಲ್ಲಿ ಬಿಡಾರ ಹಾಕಿದ್ದರು.

ದೇವಸ್ಥಾನ ನಿಗದಿ ಮಾಡಿದ್ದ ಪಾರ್ಕಿಂಗ್ ಸ್ಥಳಗಳು ಫುಲ್ ಆಗಿದ್ದರಿಂದ ಪತ್ತೇಪುರ ರಸ್ತೆ, ಮಾಳನಾಯಕನಹಳ್ಳಿ ರಸ್ತೆ, ಕೋಟೆಹಾಳ್ ರಸ್ತೆಯಲ್ಲೂ ಜನ ತಮ್ಮ ವಾಹನಗಳನ್ನು ನಿಲ್ಲಿಸಿದ್ದರು.

ಇದೇ ದಿನಾಂಕ 7 ರವರೆಗೂ ಅಜ್ಜಯ್ಯನ ಜಾತ್ರೆ ನಡೆಯಲಿದ್ದು, ಹರಿಹರ, ದಾವಣಗೆರೆ, ಹೊನ್ನಾಳಿ, ರಾಣೇಬೆನ್ನೂರು, ಹಿರೇಕೆರೂರು, ರಟ್ಟಿಹಳ್ಳಿ, ತುಮ್ಮಿನಕಟ್ಟೆಯಿಂದ ಕೆಎಸ್‌ಆರ್‌ಟಿಸಿ ಬಸ್ ಸೌಲಭ್ಯವನ್ನು ಕಲ್ಪಿಸಲಾಗಿದೆ.

ದೇವಸ್ಥಾನದ ದಾಸೋಹ ಭವನದಲ್ಲಿ ಅನ್ನ ದಾಸೋಹ ನಿರಂತರವಾಗಿ ನಡೆಯುತ್ತಿದ್ದು, ಭಕ್ತರು ಸ್ವಚ್ಛತೆಗೆ ಒತ್ತು ನೀಡಿ, ಸಹಕರಿಸುವಂತೆ ಗದ್ದಿಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಎಸ್. ಸುರೇಶ್ ಮನವಿ ಮಾಡಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಅವರ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ಬಸವರಾಜ್, ಸಿಪಿಐ ಸುರೇಶ್ ಸಗರಿ, ಪಿಎಸ್‌ಐ ಪ್ರಭು ಕೆಳಗಿನಮನಿ ಅವರ ನೇತೃತ್ವದಲ್ಲಿ ಸೂಕ್ತ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

ದೇವಸ್ಥಾನದ ಗದ್ದಿಗೆ ಟ್ರಸ್ಟ್ ಕಮಿಟಿಯ ಟ್ರಸ್ಟಿಗಳಾದ ಜಿಗಳಿ ಇಂದೂಧರ್, ಪ್ರಕಾಶ್ ಕೋಟೇರ, ಗದಿಗೆಪ್ಪ ಹೊಸಳ್ಳಿ, ಗದಿಗೆಯ್ಯ ಪಾಟೀಲ್, ನಾಗರಾಜ್ ದಿಲ್ಲಿವಾಲ, ವಿವೇಕಾನಂದ ಪಾಟೀಲ್, ಬಸವನಗೌಡ ಪಾಳೇದ್, ವೀರನಗೌಡ ಹಲಗಪ್ಪನವರ ಹಾಜರಿದ್ದು, ರಥೋತ್ಸವದ ಕಾರ್ಯಕ್ರಮಗಳ ಯಶಸ್ಸಿಗೆ ಶ್ರಮಿಸಿದರು.

# ದೇಶೀ ಕ್ರೀಡೆಗಳ ಬಗ್ಗೆ ಒಲವು, ಆಸಕ್ತಿ ಬೆಳೆಸಲು ಕಬಡ್ಡಿ ಪಂದ್ಯಾವಳಿ : ದಿನೇಶ್ ಶೆಟ್ಟಿ



ದಾವಣಗೆರೆ, ಮಾ. 1- ನಗರದ ಅಮೆಚೂರ್ ಕಬಡ್ಡಿ ಸಂಸ್ಥೆ, ಸೃಷ್ಟಿ ಕಬಡ್ಡಿ ಅಕಾಡೆಮಿ ಹಾಗೂ ಜನಪ್ರಿಯ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಸ್ಥೆಯಿಂದ ಸ್ಥಳೀಯ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾ ಮಟ್ಟದ ಹೊನಲು ಬೆಳಕಿನ ಕಬಡ್ಡಿ ಪ್ರೀಮಿಯರ್ ಲೀಗ್ - 2025 ನಿನ್ನೆ ಆರಂಭವಾಯಿತು.

ದೂಡಾ ಅಧ್ಯಕ್ಷ ಹಾಗೂ ಜನಪ್ರಿಯ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಪಂದ್ಯಾವಳಿಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತಮಾಡಿದ ಅವರು, ಲೀಗ್ ಮಾದರಿಯಲ್ಲಿ ನಿತ್ಯವೂ 10 ಪಂದ್ಯಗಳನ್ನು ನಡೆಸಲಾಗುವುದು. ಒಟ್ಟು 24 ಪಂದ್ಯ, ಲೀಗ್‌ನಲ್ಲಿ ಟಾಪ್ 4 ಮಾದರಿ ಪಂದ್ಯ ನಡೆಯಲಿದೆ. ಕಬಡ್ಡಿ ನಮ್ಮ ಊರಿನಲ್ಲಿ ಜನಪ್ರಿಯ ಕ್ರೀಡೆಯಾಗಿದೆ ಎಂದರು.

ಕಬಡ್ಡಿ ಪಂದ್ಯಾವಳಿಯಲ್ಲಿ ಮೊದಲ ಬಹುಮಾನ 2 ಲಕ್ಷ ರೂ. ನಗದು, ದ್ವಿತೀಯ 1 ಲಕ್ಷ ರೂ. ಹಾಗೂ ತೃತೀಯ ಮತ್ತು ನಾಲ್ಕನೇ ಸ್ಥಾನ ಪಡೆದ ತಂಡಗಳಿಗೆ ತಲಾ 25 ಸಾವಿರ ರೂ. ನಗದು ಬಹುಮಾನ ನೀಡಲಾಗುವುದು. ವಿದ್ಯಾರ್ಥಿ, ಯುವಜನರಲ್ಲಿ ದೇಶೀ ಕ್ರೀಡೆಯ ಬಗ್ಗೆ ಒಲವು, ಆಸಕ್ತಿ ಬೆಳೆಸಲು ಈ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ದಿನೇಶ್ ಶೆಟ್ಟಿ ತಿಳಿಸಿದರು.

ಉಪಾಧ್ಯಕ್ಷ ಶ್ರೀನಿವಾಸ ಶಿವಗಂಗಾ, ಕಾರ್ಯದರ್ಶಿ ಜಯಪ್ರಕಾಶ, ಸಹ ಕಾರ್ಯದರ್ಶಿ ಕುರುಡಿ ಗಿರೀಶ್ ಸ್ವಾಮಿ, ಎಂ. ನಾಗರಾಜ್, ಕಬಡ್ಡಿ ಮಲ್ಲು, (ಮಲ್ಲಿಕಾರ್ಜುನ), ಎಸ್. ಚಂದ್ರಪ್ಪ, ಲಯನ್ಸ್ ಅಧ್ಯಕ್ಷ ಉಳವಯ್ಯ, ಪಾಲಿಕೆ ಮಾಜಿ ಸದಸ್ಯ ನಾಗರಾಜ್, ರಾಕೇಶ್, ಯುವರಾಜ, ಶ್ರೀಕಾಂತ ಬಗರೆ, ಎ.ವೈ. ಶಿವು ಕಬಡ್ಡಿ, ಮುಸ್ತಫಾ, ಮಂಜು, ಸೂರ್ಯಪ್ರಕಾಶ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಶಂಕರಲಿಂಗ ಭಗವಾನ್ ಸರಸ್ವತಿ ಪರಮಹಂಸರ ಆರಾಧನೆ



**ಕೊಮಾರನಹಳ್ಳಿ**

ಮಲೇಬೆನ್ನೂರು ಸಮೀಪದ ಕೊಮಾರನಹಳ್ಳಿಯ ಶ್ರೀ ರಂಗನಾಥ ಆಶ್ರಮದಲ್ಲಿ ಕಳೆದ ಒಂದು ವಾರದಿಂದ ನಡೆಯುತ್ತಿರುವ ಶ್ರೀ ಶಂಕರಲಿಂಗ ಭಗವಾನ್ ಸರಸ್ವತೀ ಪರಮಹಂಸರ 72ನೇ ವರ್ಷದ ಆರಾಧನಾ ಮಹೋತ್ಸವವು ಇಂದು ಸಮಾರೋಪಗೊಳ್ಳಲಿದೆ. ಇಂದು ಶ್ರೀಗಳವರ ಆರಾಧನಾ ಕಾರ್ಯಕ್ರಮ ನಡೆಯಲಿದೆ.

# ನಗರದಲ್ಲಿ ಇಂದು ರಾಘವೇಂದ್ರ ಸ್ವಾಮಿ ಮಠದ 49ನೇ ವಾರ್ಷಿಕೋತ್ಸವ



ಕಸ್ತೂರಬಾ ಬಡಾವಣೆಯ ದೀಕ್ಷಿತ್ ರಸ್ತೆಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದ 49ನೇ ವಾರ್ಷಿಕೋತ್ಸವ ಸಮಾರಂಭ ಮತ್ತು ಶ್ರೀ ಗುರು ಸಾರ್ವಭೌಮರ 404ನೇ ಪಟ್ಟಾಭಿಷೇಕ ಮಹೋತ್ಸವವು ಇಂದು ನಡೆಯಲಿದೆ.

ಮುಂಜಾನೆ ಹೋಮ, ಪಂಚಾಮೃತಾಭಿಷೇಕ, ಪೂರ್ಣಾಹುತಿ, ಬೆಳಿಗ್ಗೆ 10 ಗಂಟೆಗೆ ಉಪನ್ಯಾಸ, ಸಂಜೆ ವಿವಿಧ ಕಾರ್ಯಕ್ರಮಗಳು ಜರುಗಲಿವೆ.

# ಹರಿಹರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಭರಂಪುರ, ಮಾರಾಟ ಗಲ್ಲಿ, ಸಿಬಾರ ಸರ್ಕಲ್, ಮಿನಿ ವಿಧಾನ ಸೌಧ, ಪೊಲೀಸ್ ಸ್ಟೇಷನ್, ದೊಡ್ಡಬೀದಿ ಕುರುಬರ ಬೀದಿ ಸ್ಥಳಗಳಿಗೆ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ಹಾಗೂ ಚಿಂತಾಮಣಿ ನಗರ, ಆಶ್ರಯ ಕಾಲೋನಿ, ಟಿಪ್ಪುನಗರ, ಕೆ.ಆರ್.ನಗರ, ವಿಜಯನಗರ, ಕೇಶವ ನಗರ, ಪೊಲೀಸ್ ಕ್ವಾಟ್ರಸ್, ರೈಲ್ವೆ ಸ್ಟೇಷನ್, ಬಾತಿ ಶಿವನಾಗಪ್ಪ ಕಾಂಪೌಂಡ್, ಪಿ.ಬಿ. ರಸ್ತೆ ಸುತ್ತಮುತ್ತಲಿನ ಪ್ರದೇಶಗಳಿಗೆ ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ ವಿದ್ಯುತ್ ವ್ಯತ್ಯಯ ವಾಗಲಿದೆ.

# ಲಿಂಗಾಯತ ಸಮುದಾಯ ನಿಮ್ಮ ಬೆನ್ನಿಗಿದೆ

(3ನೇ ಪುಟದಿಂದ) ಹೇಳಿದರು.

ಸಿದ್ದರಾಮಯ್ಯ ಅವರ ಹಿಂದೆ ಅವರ ಸಮುದಾಯ ಬಲವಾಗಿ ನಿಂತಿರುವುದರಿಂದ ಅವರು ಕಳೆದ ಅವಧಿಯಲ್ಲಿ ಐದು ವರ್ಷ ಪೂರ್ಣ ಅಧಿಕಾರ ನಡೆಸಿದರು. ಈ ರೀತಿಯ ಒಗ್ಗಟ್ಟು ನಮ್ಮಲ್ಲಿ ಇಲ್ಲದ ಕಾರಣ ಯಡಿಯೂರಪ್ಪ ಅವರು ಒಮ್ಮೆಯೂ ಐದು ವರ್ಷ ಪೂರ್ಣ ಅಧಿಕಾರ ನಡೆಸಲಾಗಲಿಲ್ಲ ಎಂದು ರೇಣುಕಾಚಾರ್ಯ ಹೇಳಿದರು.

ಚನ್ನಗಿರಿ ಮಾಜಿ ಶಾಸಕ ಮಾಡಾಳ್ ವಿರುಪಾಕ್ಷಪ್ಪ ಮಾತನಾಡುತ್ತಾ, ರಾಜ್ಯದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತಂದಿದ್ದೇ ಯಡಿಯೂರಪ್ಪ. ಅಧಿಕಾರಕ್ಕೆ ತರಲು ಯಡಿಯೂರಪ್ಪ ಬೇಕು, ಅಧಿಕಾರ ಮಾಡಲು ಬೇರೆಯವರು ಬೇಕು ಎಂಬ ಭಾವನೆ ಸರಿಯಲ್ಲ ಎಂದರು.

ಬಿ.ವೈ.ವಿಜಯೇಂದ್ರ ಅವರಿಂದ ರಾಜ್ಯದಲ್ಲಿ ಸಂಚಲನವಾಗುತ್ತಿದೆ. ಅವರ ನಾಯಕತ್ವದಲ್ಲಿಯೇ ಮುಂದಿನ ಚುನಾವಣೆ ನಡೆದು ಬಿಜೆಪಿ ಅಧಿಕಾರಕ್ಕೆ ಬರಬೇಕೆಂಬ ಆಶಯ ರಾಜ್ಯದ ಜನತೆಯದ್ದಾಗಿದೆ. ಅಷ್ಟಕ್ಕೂ ಅವರನ್ನು ರಾಜ್ಯಾಧ್ಯಕ್ಷ ಸ್ಥಾನದಿಂದ ಏಕೆ ಬದಲಿಸಬೇಕು? ಎಂದು ಪ್ರಶ್ನಿಸಿದರು.

ಪ್ರಬಲ ಮತದಾರರಾದ ವೀರಶೈವ ಲಿಂಗಾಯತ ಮತದಾರರಿಂದಲೇ ಬಿಜೆಪಿ ಎರಡು ಬಾರಿ ಅಧಿಕಾರಕ್ಕೆ ಬಂದಿದೆ ಎಂದು ಹೇಳಿದರು.

ರಾಣೇಬೆನ್ನೂರಿನ ಮಾಜಿ ಶಾಸಕ ಅರುಣ್ ಕುಮಾರ್ ಪೂಜಾರ್ ಮಾತನಾಡಿ, ವೀರಶೈವ ಲಿಂಗಾಯತರನ್ನು ತುಳಿಯಲೆಂದೇ ಒಂದು ವರ್ಗವಿದೆ. ಬಿಎಸ್‌ವೈ ಅವರ ಕುಟುಂಬ ಬಿಜೆಪಿ ಬೆನ್ನೆಲುಬು. ಅವರ ಶಕ್ತಿ ಕುಂದಿಸಲು ಸಾಧ್ಯವಿಲ್ಲ. ನಾವೆಲ್ಲಾ ಒಂದಾದರೆ ರಾಜ್ಯದಲ್ಲಿ ಮತ್ತೆ ಅಧಿಕಾರ ಹಿಡಿಯಬಹುದು ಎಂದು ಹೇಳಿದರು.

ಮಾಡಾಳು ಮಲ್ಲಿಕಾರ್ಜುನ್ ಮಾತನಾಡುತ್ತಾ, ವೀರಶೈವ ಲಿಂಗಾಯತ ಸಮಾಜ ಸಂಸ್ಕಾರವಂತ ಸಮಾಜ. ಪ್ರತಿ ಬಾರಿಯೂ ಈ ಸಮಾಜವನ್ನು ಒಡೆದಾಳುವ ಕೆಲಸ ನಡೆಯುತ್ತಿದೆ. ಸಮಾಜ ಒಡೆಯಲು ನಮ್ಮವರನ್ನೇ ಎತ್ತಿ ಕಟ್ಟಲಾಗುತ್ತದೆ. ಇತಿಹಾಸದಲ್ಲೂ ಇದನ್ನು ಕಂಡಿದ್ದೇವೆ. ಎಲ್ಲರನ್ನೂ ಬೆಳೆಸಿ, ಬೆಳೆದ ಯಡಿಯೂರಪ್ಪ ಅವರನ್ನು ಐದು ವರ್ಷ ಅಧಿಕಾರ ಮಾಡಲು ಬಿಡಲಿಲ್ಲ ಎಂದರು.

ಹರಿಹರದ ಮುಖಂಡ ಚಂದ್ರಶೇಖರ ಪೂಜಾರ್ ಮಾತನಾಡಿ, ಈಗ ವಿಜಯೇಂದ್ರ ಅವರಿಗೆ ಕಿರುಕುಳ ಕೊಡುವುದನ್ನು ನೋಡುತ್ತಾ ಸುಮ್ಮನಿದ್ದರೆ, ಮುಂದೆ ಬೇರೆ ಮುಖಂಡರಿಗೂ ಕಿರುಕುಳ ನೀಡಲಾರಂಭಿಸುತ್ತಾರೆ. ನಮ್ಮ ತಂಟೆಗೆ ಬಂದರೆ ಸಹಿಸುವುದಿಲ್ಲ ಎನ್ನುವ ಎಚ್ಚರಿಕೆಯನ್ನು ನೀಡುವ ಅಗತ್ಯವಿದೆ ಎಂದು ಹೇಳಿದರು.

ಸಮಾಜದವರು ಈಗಲೇ ಎಚ್ಚೆತ್ತುಕೊಳ್ಳದಿದ್ದರೆ ನಾವು ಯಾರೂ ರಾಜಕೀಯವಾಗಿ ಬೆಳೆಯಲು ಸಾಧ್ಯವಿಲ್ಲ. ವೀರಶೈವ ಲಿಂಗಾಯತರೆಲ್ಲರೂ ಒಂದಾದಾಗ ಮಾತ್ರ ರಾಜಕೀಯ ಭವಿಷ್ಯ ಸಾಧ್ಯ ಎಂದರು.

ಚಿತ್ರದುರ್ಗದ ಲಿಂಗಮೂರ್ತಿ ಮಾತನಾಡುತ್ತಾ, ಜನಪರ ಕಾಳಜಿಯ ಮುಖಂಡ ಯಡಿಯೂರಪ್ಪನವರ ಬಗ್ಗೆ ಮಾತನಾಡುವ ಯತ್ನಾಳ್ ಅವರದ್ದು ಮನುಷ್ಯರ ನಾಲಗೆಯೇ?. ನಿಮಗೆ ಛೀಮಾರಿ ಹಾಕಬೇಕಿದೆ ಎಂದರು.

ಹಿರೇಕೆರೂರಿನ ಪಾಲಾಕ್ಷಗೌಡ ಪಾಟೀಲ ಮಾತನಾಡುತ್ತಾ, ಯಡಿಯೂರಪ್ಪ ಹಾಗೂ ಅವರ ಕುಟುಂಬದವರು ಎಲ್ಲಾ ವರ್ಗದವರಿಗೂ ಒಳ್ಳೆಯದನ್ನೇ ಮಾಡಿದ್ದಾರೆ. ಅವರಿಗೆ ಮೋಸ ಮಾಡಿದವರು ಲಕ್ವ ಹೊಡೆದು ಸಾಯುತ್ತಾರೆ ಎಂದರು.

ಈ ಸಭೆಯಲ್ಲಿ ಭಾಗವಹಿಸದಂತೆ ದೂರವಾಣಿ ಕರೆ ಮಾಡಿ ಹೇಳಿದ್ದರು. ಆದರೂ ನಾನು ಸಮಾಜದ ಒಗ್ಗಟ್ಟಿಗಾಗಿ ಹಾಗೂ ಯಡಿಯೂರಪ್ಪ ಅವರ ಕುಟುಂಬಕ್ಕೆ ಶಕ್ತಿ ತುಂಬಲು ಅವರ ಆದೇಶ ಮೀರಿ ಸಭೆಯಲ್ಲಿ ಭಾಗವಹಿಸಿದ್ದೇನೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಬಿ.ಜಿ. ಅಜಯ್ ಕುಮಾರ್, ಹನ್ನೆರಡನೇ ಶತಮಾನದಿಂದಲೂ ವೀರಶೈವ ಲಿಂಗಾಯತರನ್ನು ತುಳಿಯುವ ಕೆಲಸ ನಡೆಯುತ್ತಿದೆ. ಇದಕ್ಕೆ ಇತಿಶ್ರೀ ಹಾಡಲು ಮತ್ತು ಸಮಾಜ ಒಂದಾಗಿರಬೇಕೆಂಬ ಕಾರಣದಿಂದಾಗಿ ಎಲ್ಲಾ ಜಿಲ್ಲೆಗಳಲ್ಲೂ ಮಹಾಸಂಗಮ ಪೂರ್ವಭಾವಿ ಸಭೆ ನಡೆಯುತ್ತಲಿದೆ. ಇದು ಮೂರನೇ ಸಭೆಯಾಗಿದೆ ಎಂದು ಹೇಳಿದರು.

ವೀರಶೈವ ಲಿಂಗಾಯತ ಮುಖಂಡ ಲೋಕಿಕೆರೆ ನಾಗರಾಜ್ ಸ್ವಾಗತಿಸಿದರು. ಧನಂಜಯ ಕಡ್ಲೆಬಾಳು ಕಾರ್ಯಕ್ರಮ ನಿರೂಪಿಸಿದರು. ಸಮಾಜದ ಮುಖಂಡರುಗಳಾದ ಜಿ. ನಾಗನಗೌಡ್ರು, ಪಾಟೀಲ್ ಶಿವಣ್ಣ, ರಾಜಶೇಖರ್ ನಾಗಪ್ಪ, ಎಸ್.ಎಂ. ರೇವಣಸಿದ್ದಪ್ಪ, ಬೆಳ್ಳೂಡಿ ರಾಮಚಂದ್ರಪ್ಪ, ಬಿ.ಸಿ. ಹನುಮಂತಪ್ಪ, ಕಲ್ಯಾಣಶೆಟ್ರು, ರಮೇಶ್ ಬಸಾಪುರ, ಬೇತೂರು ನಾಗರಾಜ್ ಹಾಗೂ ಇನ್ನಿತರೆ ಪ್ರಮುಖರು ಸಭೆಯಲ್ಲಿದ್ದರು.

# ನಗರದಲ್ಲಿ ಇಂದು 'ಕುಂಚ ಕೈಪಿಡಿ' ಲೇಖನಗಳ ಸಂಗ್ರಹದ ಪುಸ್ತಕ ಬಿಡುಗಡೆ

ದಾವಣಗೆರೆ, ಮಾ. 1- ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ವತಿಯಿಂದ 'ಕಾವ್ಯ ಕುಂಚ'ಐದನೇ ಭಾಗದ ಕವನ ಸಂಕಲನ ಮತ್ತು 'ಕುಂಚ ಕೈಪಿಡಿ' ಲೇಖನಗಳ ಸಂಗ್ರಹದ ಪುಸ್ತಕ ನಾಳೆ ದಿನಾಂಕ 2 ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ರೋಟರಿ ಬಾಲಭವನದಲ್ಲಿ ಲೋಕಾರ್ಪಣೆಗೊಳ್ಳಲಿದೆ ಎಂದು ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಂದು ಬೆಳಿಗ್ಗೆ 10 ರಿಂದ 11 ರವರೆಗೆ ರಾಜ್ಯಮಟ್ಟದ ಕವಿಗೋಷ್ಠಿ ನಡೆಯಲಿದೆ. ಸಾಹಿತಿ ಶ್ರೀ ಸಿದ್ದೇಶ್ವರ ಸಾಹಿತ್ಯ ವೇದಿಕೆಯ ಸಂಸ್ಥಾಪಕರಾದ ಗಿರಿಜಾ ಮಾಲಿ ಪಾಟೀಲ್ 'ಕಾವ್ಯ ಕುಂಚ' ಕವನ ಸಂಕಲನ ಮತ್ತು 'ಕುಂಚ ಕೈಪಿಡಿ'ಯನ್ನು ಬೆಳಿಗ್ಗೆ 11 ಕ್ಕೆ ಲೋಕಾರ್ಪಣೆ ಮಾಡಲಿದ್ದಾರೆ.

ಕಲಾಕುಂಚ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಮೂಡಬಿದ್ರೆಯ ಹಿರಿಯ ಸಾಹಿತಿ ಡಾ. ರಾಮಕೃಷ್ಣ ಶಿರೂರು, ಯುವ ಕವಯತ್ರಿ ಜಮಖಂಡಿಯ ಡಾ. ಶ್ರೀದೇವಿ ಸೂರ್ಯಕಾಂತ ಸುವರ್ಣಖಂಡಿ ಆಗಮಿಸಲಿದ್ದಾರೆ.

ಕಲಾ ಕುಂಚ ಸಂಸ್ಥೆಯ ಅಧ್ಯಕ್ಷ ಕೆ.ಹೆಚ್. ಮಂಜುನಾಥ್, ಮಹಿಳಾ ವಿಭಾಗದ ಅಧ್ಯಕ್ಷೆ ಹೇಮಾ ಶಾಂತಪ್ಪ ಪೂಜಾರಿ ಗೌರವ ಉಪಸ್ಥಿತರಿರುತ್ತಾರೆ. ಪತ್ರಿಕಾಗೋಷ್ಠಿಯಲ್ಲಿ ಮಹಿಳಾ ವಿಭಾಗದ ಸಂಸ್ಥಾಪಕರಾದ ಜ್ಯೋತಿ ಗಣೇಶ ಶೆಣೈ, ಪ್ರಭಾ ರವೀಂದ್ರ, ಲಲಿತಾ ಕಲ್ಲೇಶ್, ರಾಜಶೇಖರ್ ಬೆನ್ನೂರು, ವಿ. ಕೃಷ್ಣಮೂರ್ತಿ, ಕೆ.ಸಿ. ಉಮೇಶ್ ಉಪಸ್ಥಿತರಿದ್ದರು.

# ಭಾರತ ಈಗ ವಿಶ್ವದ ಕಾರ್ಖಾನೆಯಾಗುತ್ತಿದೆ : ಮೋದಿ

ನವದೆಹಲಿ, ಮಾ. 1 - ಸ್ಥಳೀಯವಾಗಿ ಉತ್ಪಾದಿಸಲಾದ ಸರಕುಗಳನ್ನು ಖರೀದಿಸುವಂತೆ ನಡೆಸಿದ ಅಭಿಯಾನ ಫಲ ನೀಡುತ್ತಿದೆ. ಭಾರತದ ಉತ್ಪನ್ನಗಳು ಈಗ ಜಗತ್ತಿನಾದ್ಯಂತ ಹರಡುತ್ತಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಎನ್‌ಎಕ್ಸ್‌ಟಿ ಕಾನ್‌ಕ್ಲೇವ್ ಸಮಾರಂಭದಲ್ಲಿ ಮಾತನಾಡಿದ ಮೋದಿ, ಭಾರತ ಈಗ ಅಗಣಿತ ಆವಿಷ್ಕಾರಗಳ ತಾಣವಾಗುತ್ತಿದೆ. ಕೈಗೆಟುಕುವ ದರದ ಪರಿಹಾರಗಳನ್ನು ಶೋಧಿಸಿ, ಅದನ್ನು ವಿಶ್ವಕ್ಕೆ ನೀಡುತ್ತಿದೆ ಎಂದರು.

ಭಾರತ ಈಗ ಉತ್ಪಾದನಾ ತಾಣವಾಗುತ್ತಿದೆ ಹಾಗೂ ವಿಶ್ವದ ಕಾರ್ಖಾನೆಯಾಗುತ್ತಿದೆ ಎಂದು ಪ್ರಧಾನಿ ಹೇಳಿದರು.

# ನಿಗದಿಪಡಿಸಿದ್ದ ಶುಲ್ಕ ರದ್ದು

(3ನೇ ಪುಟದಿಂದ) ತಕ್ಷಣ ಸಚಿವರು, ಶುಲ್ಕ ನಿಗದಿ ಆದೇಶ ರದ್ದು ಪಡಿಸುವಂತೆ, ಬಡ ವರ್ಗದ ನಿವೇಶನ ದಾರರಿಗೆ ಅನುಕೂಲದ ಕ್ರಮಗಳನ್ನು ಜಾರಿ ಮಾಡುವಂತೆ ಸೂಚಿಸಿದರು. ಸಚಿವರ ಸೂಚನೆಯಂತೆ ಆಯುಕ್ತರು ಶುಲ್ಕ ವಿಧಿಸುವ ಆದೇಶವನ್ನು ರದ್ದು ಪಡಿಸಿ ಆದೇಶ ಹೊರಡಿಸಿದ್ದಾರೆ.

# ಸಡಿಲಿಕೆ ಸಾಧ್ಯವಿಲ್ಲ

(3ನೇ ಪುಟದಿಂದ) 9ನೇ ತರಗತಿ ಪರೀಕ್ಷೆಗಳು ಎಂದಿನಂತೆ ನಡೆಯ ಲಿವೆ. ಕನ್ನಡ ಸಂಘಟನೆಗಳು ಕರೆದಿರುವ ಬಂದ್ ಹಿನ್ನೆಲೆಯಲ್ಲಿ ನಾವು ಪರೀಕ್ಷೆಗಳನ್ನು ಮುಂದೂ ಡಲು ಸಾಧ್ಯವಿಲ್ಲ. ಮಕ್ಕಳು ಪರೀಕ್ಷೆ ಬರೆಯಲು ಹೋಗುತ್ತಾರೆ ಎಂದರೆ, ಬಂದ್ ಕರೆ ನೀಡಿ ರುವವರೂ ಅಡ್ಡಿಪಡಿಸ ಲಾರರು, ಬೇಕಿದ್ದರೆ, ಬಂದ್ ಕರೆ ನೀಡಿರುವ ಪ್ರಾಯೋಜಕರೇ ಬಂದ್ ದಿನವನ್ನು ಬದಲಿಸಿಕೊಳ್ಳಲಿ ಎಂದರು.

**ರಂಜಾನ್ ರೋಜಾ ಸಮಯ**

ದಿನಾಂಕ 02.03.2025
ಇಫ್ತೇಯಾರಿ ಸಮಯ : 6-40
ದಿನಾಂಕ 03.03.2025
ಸಹೇರಿ ಸಮಯ : 5-22


## ತೆಲಗಿ ಮಂಜುನಾಥ್ ನಿಧನ



ದಾವಣಗೆರೆ ಎಂ.ಜಿ. ರಸ್ತೆಯಲ್ಲಿರುವ **ತೆಲಗಿ ವೀರಪ್ಪ ಅಂಡ್ ಸನ್ಸ್** ಮಾಲೀಕರಾದ **ಶ್ರೀ ತೆಲಗಿ ಮಂಜುನಾಥ್** ಅವರು ದಿನಾಂಕ 01.03.2025ರ ಶನಿವಾರ ತಡರಾತ್ರಿ 2.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 82 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳನ್ನು ಅವರು ಅಗಲಿದ್ದಾರೆ. ದಿವಂಗತರ ಪಾರ್ಥಿವ ಶರೀರವನ್ನು ಹಗೇದಿಬ್ಬ ವೃತ್ತದ ಬಳಿಯ ಕುಂಬಾರ ಪೇಟೆಯಲ್ಲಿರುವ ಅವರ ನಿವಾಸದಲ್ಲಿಡಲಾಗಿದ್ದು, ದಿನಾಂಕ 02.03.2025ರ ಭಾನುವಾರ ಮಧ್ಯಾಹ್ನ 2.30ಕ್ಕೆ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

- ದುಃಖತಪ್ತ ಕುಟುಂಬ ವರ್ಗ

॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥

## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಸಿಟಿ ಸರಸ್ವತಿ ಬಡಾವಣೆ ವಾಸಿ **ಶ್ರೀಮತಿ ಬಿ.ಕೆ. ಜಯಶ್ರೀ ಮತ್ತು ಮಕ್ಕಳು** ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ : 23.02.2025ನೇ ಭಾನುವಾರ ಬೆಳಿಗ್ಗೆ 8.40ಕ್ಕೆ ನನ್ನ ಪೂಜ್ಯ ಪತಿಯವರಾದ

**ಶ್ರೀ ಬಿ.ಇ. ಕಲಿವೀರಪ್ಪ**

ದೈವಾಧೀನರಾದ ಪ್ರಯುಕ್ತ ತತ್ಸಂಬಂಧವಾದ

**ಕೈಲಾಸ ಸಮಾರಾಧನೆಯನ್ನು**

ದಿನಾಂಕ : 03.03.2025ನೇ ಸೋಮವಾರ ಬೆಳಿಗ್ಗೆ 10.30ಕ್ಕೆ 2ನೇ ಮೇನ್, 5ನೇ ಕ್ರಾಸ್, ಸರಸ್ವತಿ ಬಡಾವಣೆ, 'ಬಿ' ಬ್ಲಾಕ್ ದಾವಣಗೆರೆಯ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ಬಿ.ಕೆ. ಜಯಶ್ರೀ ಮತ್ತು ಮಕ್ಕಳು, ಅಳಿಯ ಹಾಗೂ ಬಂಧು-ಮಿತ್ರರು. ಮೊ : **83102 47403**

ವಿ.ಸೂ. ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೆ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


# ಹರಿಹರದ ಬಳಿ ಅಪರಿಚಿತನ ಶವ ಪತ್ತೆ

ಹರಿಹರ, ಮಾ.1- ತಾಲ್ಲೂಕಿನ ಹರಗನಹಳ್ಳಿ ಗ್ರಾಮದ ಎನ್.ಹೆಚ್-48 ರಸ್ತೆಯಲ್ಲಿ ಯಾವುದೋ ವಾಹನದಿಂದ ಅಪಘಾತವಾಗಿ 2024 ರ ಡಿಸೆಂಬರ್ 21ರಂದು ಸುಮಾರು 25 ರಿಂದ 30 ವರ್ಷ ವಯಸ್ಸಿನ ಅಪರಿಚಿತ ವ್ಯಕ್ತಿಯೊಬ್ಬನ ಮೃತ ದೇಹವು ದೊರೆತಿದೆ. ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಮೈಬಣ್ಣ, ನೀಲಿ ಶರ್ಟ್, ಬಿಳಿ ಬನಿಯನ್, ನೀಲಿ ನಿಕ್ಕರ್ ಧರಿಸಿರುತ್ತಾನೆ. ಸಂಬಂಧಪಟ್ಟಲ್ಲಿ ಹರಿಹರ ಪೊಲೀಸ್ ಠಾಣೆ (08192-253100, 262550, 9480803259)ಯನ್ನು ಸಂಪರ್ಕಿಸಬಹುದು.

# ಚಿಕ್ಕಜಾಜೂರು : ಅಪರಿಚಿತನ ಶವ ಪತ್ತೆ

ದಾವಣಗೆರೆ, ಮಾ.1- ಚಿಕ್ಕಜಾಜೂರು-ಹೊಳಲ್ಕೆರೆ ರೈಲ್ವೆ ನಿಲ್ದಾಣಗಳ ಮಧ್ಯದ ಹಳಿಗಳ ಮೇಲೆ ನಿನ್ನೆ ಸುಮಾರು 35 ವರ್ಷದ ವ್ಯಕ್ತಿ ಮೃತಪಟ್ಟಿದ್ದಾನೆ. ಗೋಧಿ ಮೈಬಣ್ಣ, ಸದೃಢ ಮೈಕಟ್ಟು, ದುಂಡು ಮುಖ, ಗಡ್ಡವನ್ನು ಬಿಟ್ಟಿರುವ ಈತ, ಬಿಳಿ ಬಣ್ಣದ ಕಪ್ಪು ಪಟ್ಟಿಯುಳ್ಳ (ಕಲರ್ ಕಿಂಗ್) ಕಂಪನಿಯ ರೆಡಿಮೇಡ್ ಶರ್ಟ್ ಧರಿಸಿದ್ದಾನೆ. ಸಂಬಂಧಿಸಿದವರು ರೈಲ್ವೆ ಪೊಲೀಸರನ್ನು (08192 259643, 9480802123) ಸಂಪರ್ಕಿಸಬಹುದು.

# ರಾಯಚೋಟಿಯಲ್ಲಿ ಇಂದು ಶ್ರೀ ವೀರಭದ್ರೇಶ್ವರ ಸ್ವಾಮಿ ರಥೋತ್ಸವ



ಆಂಧ್ರಪ್ರದೇಶ ಅನ್ನಮಯ್ಯ ಜಿಲ್ಲೆಯ ರಾಯಚೋಟಿಯ ಕ್ಷೇತ್ರಾಧಿಪತಿ ಶ್ರೀ ಭದ್ರಕಾಳಿ ಸಮೇತ ಶ್ರೀ ವೀರಭದ್ರಸ್ವಾಮಿ ರಥೋತ್ಸವವು ಇಂದು ಭಾನುವಾರ ಸಂಜೆ 4.30 ಕ್ಕೆ ನಡೆಯಲಿದೆ. ಇಂದು ಬೆಳಿಗ್ಗೆ 4 ಗಂಟೆಗೆ ಅಗ್ನಿಕುಂಡ ಪ್ರವೇಶ, ನಂತರ 11.45 ಗಂಟೆಗೆ ವಜ್ರದ ತ್ರಿನೇತ್ರ ಧಾರಣೆ ಹಾಗೂ ಮಹಾನೈವೇದ್ಯ, ಸಂಜೆ 4.30 ಗಂಟೆಗೆ ಶ್ರೀ ಭದ್ರಕಾಳಿ ಸಮೇತ ಶ್ರೀ ವೀರಭದ್ರಸ್ವಾಮಿ ಉತ್ಸವ, ಮೂರ್ತಿಗಳೊಂದಿಗೆ ರಥೋತ್ಸವವು ಜರುಗುವುದು.

# ನಗರದಲ್ಲಿ ಇಂದು ಶಿವರಾತ್ರಿ ಜಾಗರಣೆ

ಲೇಬರ್ ಕಾಲೋನಿ 6ನೇ ತಿರುವಿನಲ್ಲಿರುವ (ಕೆಎಸ್ಸಾರ್ಟಿಸಿ ಬಸ್ ಸ್ಟ್ಯಾಂಡ್ ರಸ್ತೆ) ಗುರು ಕರಿಬಸವೇಶ್ವರ ಸ್ವಾಮಿ ದೇವಸ್ಥಾನದಲ್ಲಿ 57ನೇ ವರ್ಷದ ಶಿವರಾತ್ರಿ ಜಾಗರಣೆ ಮಹೋತ್ಸವ ನಡೆಯಲಿದೆ. ಇಂದು 8 ಗಂಟೆಗೆ ಸ್ವಾಮಿಗೆ ಪೂಜೆ ಪಳಾರ ಹಾಕಿಸುವುದು. 4ರಂದು ಸಂಜೆ ಪೂಜೆ ನಡೆಯಲಿದ್ದು, ನಂತರ ಪಳಾರ ವಿತರಣೆ ನಡೆಯಲಿದೆ.


## ಭಾವಪೂರ್ಣ ಶ್ರದ್ಧಾಂಜಲಿ



**ಕರೆ ಹನುಮಂತಪ್ಪ ಲೋಕಿಕೆರೆ**

ನಿವೃತ್ತ ಕೆಇಬಿ ಮ್ಯಾನೇಜರ್

ಇವರು ದಿನಾಂಕ : 28.02.2025ರ ಶುಕ್ರವಾರ ರಾತ್ರಿ 10.00 ಗಂಟೆಗೆ ನಿಧನರಾಗಿದ್ದು, ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತನು ಇವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಇವರ ಕುಟುಂಬಕ್ಕೆ ನೀಡಲೆಂದು ಪ್ರಾರ್ಥಿಸುತ್ತೇವೆ.

**ಡಾ॥ ಶಿವಮೂರ್ತಪ್ಪ ಮತ್ತು ಕುಟುಂಬದವರು ದೊಡ್ಮನೆ ವಂಶಸ್ಥರು (ಮತ್ತಿ) ದಾವಣಗೆರೆ.**

## ಪುಣ್ಯಸ್ಮರಣೆ



ಜನನ : 1937 ನಿಧನ : 2019

**ಲಿಂ॥ ಶ್ರೀ ಎ.ಸಿ. ಜಯಣ್ಣನವರು**

ಬೆಲ್ಲದ ವ್ಯಾಪಾರಿಗಳು ಹಾಗೂ ಖಜಾಂಚಿ, ಬಾಪೂಜಿ ವಿದ್ಯಾಸಂಸ್ಥೆ, ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ
ಆರು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿ,
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ
ಮುನ್ನಡೆಯುತ್ತಿದ್ದೇವೆ.

- ಧರ್ಮಪತ್ನಿ : ಶ್ರೀಮತಿ ರಾಜೇಶ್ವರಿ ಎ.ಸಿ. ಜಯಣ್ಣ
- ಶ್ರೀಮತಿ ಎ.ಜೆ. ಲತಾ ಮತ್ತು ಡಾ॥ ಎಂ. ಚಂದ್ರಶೇಖರ್ ಹಾಗೂ ಮಕ್ಕಳು
- ಶ್ರೀಮತಿ ಸಪ್ನ ಎ.ಜೆ. ಸಂದೀಪ್ ಹಾಗೂ ಮಕ್ಕಳು
- ಶ್ರೀಮತಿ ಡಾ॥ ಎ.ಜೆ. ಸ್ಮಿತ ಮತ್ತು ಡಾ॥ ಪಿ.ಎಸ್. ಬಾಲು ಹಾಗೂ ಮಕ್ಕಳು
- ಶ್ರೀಮತಿ ಡಾ॥ ಎ.ಜೆ. ನೀತಾ, ಪ್ರಾಂಶುಪಾಲರು, ಬಿಇಎ ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆ. ಮತ್ತು ಡಾ॥ ಬಿ.ಇ. ರಂಗಸ್ವಾಮಿ ಹಾಗೂ ಮಕ್ಕಳು, ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.
- ಕುಟುಂಬ ವರ್ಗದವರು ಹಾಗೂ ಬಂಧು-ಮಿತ್ರರು.


# ಬಡಾವಣೆಗಳ ಅಭಿವೃದ್ಧಿಗೆ 100 ಕೋಟಿ

(3ನೇ ಪುಟದಿಂದ) 206ರಲ್ಲಿರುವ ಉದ್ಯಾನವನ ಅಭಿವೃದ್ಧಿಗಾಗಿ ರೂ.20 ಲಕ್ಷ, ಡಿ.ಸಿ.ಎಂ. ಲೇಔಟ್‌ನಲ್ಲಿ ಬರುವ ಶಿವರಾಂ ಕಾರಂತ್ ಉದ್ಯಾನವನದ ಅಭಿವೃದ್ಧಿಗಾಗಿ ರೂ.75 ಲಕ್ಷಗಳನ್ನು ಮೀಸಲಿರಿಸಲಾಗಿದೆ.

ಮಹಾಯೋಜನೆಯಲ್ಲಿರುವ ಹರಿಹರ ತಾಲ್ಲೂಕು ಮಹಜೇನಹಳ್ಳಿ ಗ್ರಾಮದ ರಿ.ಸ.ನಂ:9/2ರಲ್ಲಿ ಉದ್ಯಾನವನ ಅಭಿವೃದ್ಧಿ ಪಡಿಸಲು ರೂ.25 ಲಕ್ಷ, ಶಾಮನೂರು ರಿ.ಸ.ನಂ: 10/1ರಲ್ಲಿನ ಉದ್ಯಾನವನ ಅಭಿವೃದ್ಧಿಗಾಗಿ ರೂ.85 ಲಕ್ಷ, ರೂ.16.63 ಲಕ್ಷಗಳನ್ನು ಸರ್ಕಾರಕ್ಕೆ ಪಾವತಿ ಮಾಡಬಹುದಾದ ಸೆಸ್‌ಗಾಗಿ ಕಾಯ್ದಿರಿಸಲು ತೀರ್ಮಾನಿಸಲಾಗಿದೆ ಎಂದು ಅವರು ಹೇಳಿದರು.

2025-26ನೇ ಸಾಲಿನ ಹೊಸ ಕಾಮಗಾರಿಗಳ ವೆಚ್ಚಕ್ಕಾಗಿ ರೂ. 10.25 ಕೋಟಿಗಳನ್ನು ಕಾಯ್ದಿರಿಸಲಾಗಿದೆ. ಜೆ.ಹೆಚ್.ಪಟೇಲ್ ಬಡಾವಣೆಯ ಬಿ, ಸಿ, ಮತ್ತು ಡಿ ಬ್ಲಾಕ್‌ನಲ್ಲಿ ಹಾಳಾಗಿರುವ ಒಳಚರಂಡಿ ದುರಸ್ತಿ ಪಡಿಸಲು ರೂ. 5 ಕೋಟಿಗಳನ್ನು ಕಾಯ್ದಿರಿಸಲಾಗಿದೆ. ಜೆ. ಹೆಚ್. ಪಟೇಲ್ ಬಡಾವಣೆಯಲ್ಲಿ ವಸತಿ ಸಮುಚ್ಛಯ ನಿರ್ಮಾಣ ಮಾಡಲು ರೂ.5 ಕೋಟಿಗಳನ್ನು ಕಾಯ್ದಿರಿಸಲಾಗಿದೆ. ಜೆ.ಹೆಚ್.ಪಟೇಲ್ ಬಡಾವಣೆಯಲ್ಲಿ ಅವಶ್ಯಕ ಎಲ್.ಇ.ಡಿ. ಬೀದಿ ದೀಪಗಳನ್ನು ಅಳವಡಿಸಿ ಬೆಳಕಿನ ವ್ಯವಸ್ಥೆಕಲ್ಪಿಸಲು ರೂ.25 ಲಕ್ಷಗಳನ್ನು ಇಡಲಾಗಿದೆ ಎಂದು ಅವರು ವಿವರಿಸಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ, ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್, ಶಾಸಕರುಗಳಾದ ಬಿ.ಪಿ. ಹರೀಶ್, ಕೆ.ಎಸ್. ಬಸವಂತಪ್ಪ ಮತ್ತಿತರರು ಹಾಜರಿದ್ದರು.

# ಫೆಬ್ರವರಿಯಲ್ಲಿ 1.84 ಲಕ್ಷ ಕೋಟಿ ರೂ. ಜಿಎಸ್‌ಟಿ ಸಂಗ್ರಹ

ನವದೆಹಲಿ, ಮಾ. 1 - ಫೆಬ್ರವರಿ ತಿಂಗಳಲ್ಲಿ 1.84 ಲಕ್ಷ ಕೋಟಿ ರೂ.ಗಳ ಜಿಎಸ್‌ಟಿ ಸಂಗ್ರಹವಾಗಿದೆ. ಇದು ಆರ್ಥಿಕ ಚೇತರಿಕೆಯ ಸೂಚನೆ ನೀಡುತ್ತಿದೆ ಎಂದು ಪರಿಣಿತರು ಹೇಳಿದ್ದಾರೆ. ಕಳೆದ ವರ್ಷ ಫೆಬ್ರವರಿ ತಿಂಗಳಲ್ಲಿ 1.68 ಲಕ್ಷ ಕೋಟಿ ರೂ.ಗಳ ಜಿಎಸ್‌ಟಿ ಸಂಗ್ರಹವಾಗಿತ್ತು.

ಅದಕ್ಕೂ ಹಿಂದಿನ ವರ್ಷ 1.5 ಲಕ್ಷ ಕೋಟಿ ರೂ. ತೆರಿಗೆ ಸಂಗ್ರಹವಾಗಿತ್ತು.

# ಜನತಾವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಮಾರ್ಚ್ 2, 2025




ಶಿಷ್ಯಾ.. ಇಲ್ಲಿದೆ ನೋಡೋ ನಿನ್ನ ನಂಬರ್... ಎಂದು ಹೇಳುವಂತಿದೆ ಈ ಚಿತ್ರ. ಶನಿವಾರ ಆರಂಭವಾದ ದ್ವಿತೀಯ ಪಿಯುಸಿ ಪರೀಕ್ಷೆಗೆ ಮುನ್ನ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರದ ಮುಂಭಾಗ ನೋಂದಣಿ ಸಂಖ್ಯೆ ಪರಿಶೀಲಿಸಿದರು.

## ಮೊದಲ ದಿನ ದ್ವಿತೀಯ ಪಿಯು ಪರೀಕ್ಷೆ ಸುಗಮ

ದಾವಣಗೆರೆ, ಮಾ.1- ಜಿಲ್ಲಾದ್ಯಂತ ದ್ವಿತೀಯ ಪಿಯುಸಿ ಪರೀಕ್ಷೆ ಸುಗಮವಾಗ ಆರಂಭವಾಯಿತು. ಶನಿವಾರ ನಡೆದ ಕನ್ನಡ ವಿಷಯಕ್ಕೆ 16648 ವಿದ್ಯಾರ್ಥಿಗಳು ಪರೀಕ್ಷೆ ಬರೆದರು. ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದ 17471 ವಿದ್ಯಾರ್ಥಿಗಳಲ್ಲಿ 823 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು.

ಒಟ್ಟಾರೆ ಜಿಲ್ಲೆಯ 35 ಕೇಂದ್ರಗಳಲ್ಲಿ 21,153 ಅಭ್ಯರ್ಥಿಗಳು ಈ ಬಾರಿ ಪರೀಕ್ಷೆ ಬರೆಯಲಿದ್ದಾರೆ. ದಾವಣಗೆರೆ ನಗರದಲ್ಲಿ 20 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಜಿಲ್ಲಾಡಳಿತದ ಸೂಚನೆಯಂತೆ ಪರೀಕ್ಷಾ ಕೇಂದ್ರಗಳಲ್ಲಿ ಗಾಳಿ, ಬೆಳಕು, ಕುಡಿಯುವ ನೀರು, ಡೆಸ್ಕ್‌ಗಳ ವ್ಯವಸ್ಥೆ ಮಾಡಲಾಗಿತ್ತು. ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿತ್ತು.

## ಶಾಲಾ ಪ್ರವೇಶ ವಯೋಮಿತಿ ಸಡಿಲಿಕೆ ಸಾಧ್ಯವಿಲ್ಲ: ಸಚಿವ

ಬೆಂಗಳೂರು, ಮಾ.1- ಒಂದನೇ ತರಗತಿ ಪ್ರವೇಶಕ್ಕೆ ಆರು ವರ್ಷ ವಯೋಮಿತಿಯಲ್ಲಿ ಸಡಿಲಿಕೆ ಸಾಧ್ಯವಿಲ್ಲ ಎಂದಿರುವ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ, ಕರ್ನಾಟಕ ಬಂದ್‌ಗೆ ಕರೆ ನೀಡಿರುವ ದಿನವೂ ಎಂದಿನಂತೆ ಪರೀಕ್ಷೆಗಳು ನಡೆಯಲಿವೆ ಎಂದು ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಯೋಮಿತಿ ಸಡಿಲಿಕೆ ವಿಚಾರದಲ್ಲಿ ಮಕ್ಕಳ ಪರವಾಗಿ ನನ್ನ ಬೆಂಬಲವೂ ಇದೆ, ಆದರೆ ಕಾನೂನಿಗೆ ವಿರುದ್ಧವಾಗಿ ಸರ್ಕಾರ ಹೋಗಲು ಸಾಧ್ಯವಿಲ್ಲ.

ಒಂದನೇ ತರಗತಿ ಪ್ರವೇಶ ವಯೋಮಿತಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳು ತೀರ್ಪು ನೀಡಿವೆ, ಇನ್ನು ಕೆಲವು ಪ್ರಕರಣಗಳು ಇತ್ಯರ್ಥಕ್ಕೆ ಬಾಕಿ ಇವೆ, ನ್ಯಾಯಾಲಯ ತೀರ್ಪು ನೀಡುವವರೆಗೂ ನಾವು ನಿಸ್ಸಹಾಯಕರು ಎಂದರು.

ಕೆಲವು ಪೋಷಕರು, ಒಂದನೇ ತರಗತಿ ಪ್ರವೇಶಕ್ಕೆ ತಮ್ಮ ಮಕ್ಕಳ ವಯೋಮಿತಿ ಏಳು ದಿನ ಕಡಿಮೆ ಇದೆ ಎನ್ನುತ್ತಾರೆ, ಇನ್ನು ಕೆಲವರು ಎರಡು-ಮೂರು ತಿಂಗಳು ಎನ್ನುತ್ತಾರೆ, ಅವರ ಸಂಕಷ್ಟ ನನಗೆ ಅರ್ಥವಾಗುತ್ತದೆ.

ಪ್ರಸಕ್ತ ಸಾಲಿಗೆ ಪ್ರವೇಶಾವಕಾಶ ತಪ್ಪಿದರೆ ಮಕ್ಕಳ ಒಂದು ವರ್ಷ ವ್ಯರ್ಥವಾಗುತ್ತದೆ ಎಂದೆಲ್ಲಾ ಅಳಲು ತೋಡಿ ಕೊಳ್ಳುತ್ತಿದ್ದಾರೆ, ಆದರೆ, ಒಂದು ದಿನ ಕಡಿಮೆ ಯಾದರೂ ಪ್ರವೇಶ ನೀಡಲು ಸಾಧ್ಯವಿಲ್ಲ ಎಂದರು. ಕರ್ನಾಟಕ ಬಂದ್ ದಿನದಂದು 7, 8, (2ನೇ ಪುಟಕ್ಕೆ)

# ಲಿಂಗಾಯತ ಸಮುದಾಯ ನಿಮ್ಮ ಬೆನ್ನಿಗಿದೆ

## ಯಡಿಯೂರಪ್ಪ ಕುಟುಂಬಕ್ಕೆ ಅಭಯ, ವಿರೋಧಿ ಬಣಕ್ಕೆ ಎಚ್ಚರಿಕೆ ರವಾನೆ

## ಸಮಾಜ ಒಡೆಯುವ ದುಷ್ಟ ಶಕ್ತಿಗಳ ವಿರುದ್ಧ ಹೋರಾಟ: ರೇಣುಕಾಚಾರ್ಯ

ದಾವಣಗೆರೆ, ಮಾ. 1- 'ವೀರಶೈವ ಲಿಂಗಾಯತ ಮುಖಂಡರು ನಾವೆಲ್ಲಾ ಒಂದಾಗಿ ಬಿ.ಎಸ್. ಯಡಿಯೂರಪ್ಪ ಹಾಗೂ ಬಿ.ವೈ. ವಿಜಯೇಂದ್ರ ಅವರ ಬೆನ್ನಿಗಿರುತ್ತೇವೆ' ಎಂಬ ಸಂದೇಶವನ್ನು ಬಿಎಸ್‌ವೈ ವಿರೋಧಿ ಬಣಕ್ಕೆ ತಲುಪಿಸುವಲ್ಲಿ ಶನಿವಾರ ನಡೆದ ವೀರಶೈವ ಲಿಂಗಾಯತ ಮಹಾಸಂಗಮದ ಪೂರ್ವಸಿದ್ಧತಾ ಸಭೆ ಯಶಸ್ವಿಯಾಗಿದೆ.

ನಗರದ ಶ್ರೀನಿಧಿ ಕನ್ವೆನ್ಷನ್ ಹಾಲ್‌ನಲ್ಲಿ ದಾವಣಗೆರೆ, ಚಿತ್ರದುರ್ಗ ಹಾಗೂ ಹಾವೇರಿ ಜಿಲ್ಲೆಗಳ ವೀರಶೈವ ಮುಖಂಡರು, ಮಾಜಿ ಶಾಸಕರು ಒಗ್ಗಟ್ಟಿನ ಮಂತ್ರ ಜಪಿಸಿ ದರು. ಬಿಎಸ್‌ವೈ ಕುಟುಂಬಕ್ಕೆ ಶಕ್ತಿ ತುಂಬುವ ಮೂಲಕ ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತರುವ ಅಭಿಪ್ರಾಯ ವ್ಯಕ್ತಪಡಿಸಿದರು.

ವೀರಶೈವ ಲಿಂಗಾಯತ ಸಮಾಜವನ್ನು ಒಡೆಯುವ ಕೆಲಸ ಮಾಡುತ್ತಿರುವ ದುಷ್ಟ ಶಕ್ತಿಗಳ ವಿರುದ್ಧ ಹೋರಾಟ ಮುಂದುವರೆ ಯಲಿದೆ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ನಮ್ಮ ಸಮಾಜ ಒಡೆಯಲು ನಮ್ಮವರೇ ಕಾರಣರಾಗಿದ್ದಾರೆ. 2020ರಲ್ಲಿ ಲಿಂಗಾಯತರಿಗೆ 2ಎ ಮೀಸಲಾತಿ ಕೊಡಲು ಯಡಿಯೂರಪ್ಪ ಮುಂದಾದಾಗ ಅದನ್ನು ತಡೆದದ್ದೂ ನಮ್ಮವರೇ. ಅಂಥವರ ವಿರುದ್ಧ ನಮ್ಮ ಹೋರಾಟ ಮುಂದುವರಿಯುತ್ತದೆ. ನಮ್ಮ ಈ ಸಭೆಗಳಿಂದ ದುಷ್ಟ ಶಕ್ತಿಗಳಿಗೆ ನಡುಕ ಶುರುವಾಗಿದೆ ಎಂದರು.

ಯಡಿಯೂರಪ್ಪ ಅವರು ಒಂದು ವರ್ಗದ ನಾಯಕರಲ್ಲ. ಅವರು ಒಂದು ಜಾತಿ, ಸಮುದಾಯಕ್ಕೆ ಸೀಮಿತರಲ್ಲ. ಹಾಗಾಗಿ ಸಭೆ ಯಲ್ಲಿ ನಾವು ಯಡಿಯೂರಪ್ಪ, ವಿಜಯೇಂದ್ರ ಅವರ ಫೋಟೋ ಆಗಲೀ, ಬಿಜೆಪಿ ಚಿಹ್ನೆಯಾ ಗಲೀ ಬಳಸಿಲ್ಲ. ವೀರಶೈವ ಲಿಂಗಾಯತ ಪ್ರತಿಪಾದಕರಾದ ಬಸವಣ್ಣ ಹಾಗೂ ಪಂಚಪೀಠದ ಪಂಚಾಚಾರ್ಯರ ಫೋಟೋ ಮಾತ್ರ ಬಳಸುತ್ತಿದ್ದೇವೆ ಎಂದು ಹೇಳಿದರು.

ಯಡಿಯೂರಪ್ಪನವರಿಗೆ ಸಾಕಷ್ಟು ತೊಂದರೆ ಕೊಟ್ಟು ಅಧಿಕಾರದಿಂದ ಕೆಳಗೆ ಇಳಿಸ ಲಾಯಿತು. ಅಷ್ಟಾದರೂ ವೀರಶೈವ ಲಿಂಗಾಯತರು ಒಂದಾಗಲಿಲ್ಲ. ಇದಕ್ಕೆ ನಮ್ಮಲ್ಲಿ ರುವವವರೇ ಕಾರಣ ಎಂದು (2ನೇ ಪುಟಕ್ಕೆ)



### ಆಗ ಹಾಲು ಕರ್‌ಕಂಡು ಈಗ ಪಿತೂರಿ ಮಾಡ್ತಾರೆ: ರವೀಂದ್ರನಾಥ್

ಬಿ.ಎಸ್. ಯಡಿಯೂರಪ್ಪ ಜತೆಗಿದ್ದುಕೊಂಡು ರಕ್ತ ಬರೋ ವರೆಗೂ ಹಾಲು ಕರ್ಕಂಡು, ಊಟ ಮಾಡಿ ಈಗ ಅವ್ರ ವಿರುದ್ಧವೇ ಪಿತೂರಿ ನಡೆಸುತ್ತಿದ್ದಾರೆ ಎಂದು ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಹೇಳಿದರು.

'ಭಜನೆ ಸೆಟ್ ಇಟ್ಕೊಂಡಿರುವ ಇವರು ಎಲ್ಲಿ ಹೋಗ್ತಾರೋ ಅಲ್ಲಿ ಭಜನೆ ಮಾಡ್ಕೊಂಡು ಹೊರಟವ್ರೆ' ದುಡ್ಡಿಗಾಗಿ ಇವರು ಏನು ಬೇಕಾದ್ರೂ ಮಾಡ್ತಾರೆ ಎಂದರು.

ಯತ್ನಾಳ್ ಅವರನ್ನು 1992ರಿಂದ ನಾನು ಬಲ್ಲೆ. ಅವರು ಎರಡು ಸಾವಿರ ಕೋಟಿ ಹಣ ಇದ್ದರೆ ಸಿಎಂ ಆಗಬಹುದು ಎಂದು ಹೇಳಿಕೆ ಕೊಟ್ಟರು. ಯಾರೂ ಹೀಗೆಲ್ಲ ಹಗುರವಾಗಿ ಮಾತಾಡ ಬಾರದು. ಇನ್ನಾದರೂ ತಿದ್ದಿಕೊಳ್ಳಬೇಕು ಎಂದು ಹೇಳಿದರು.

### ಹೈ ಕಮಾಂಡ್ ಏನು ಮಾಡುತ್ತಿದೆ?

ಎಲ್ಲಾ ಸಮಾಜದವರನ್ನೂ ಪ್ರೀತಿಸುವ ವ್ಯಕ್ತಿ ಯಡಿಯೂರಪ್ಪ. ಆದರೆ ಬಿಜೆಪಿಯವರೇ ಅವರನ್ನು ವಿರೋಧಿಸುತ್ತಿರುವುದು ಏಕೆಂದು ತಿಳಿಯುತ್ತಿಲ್ಲ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಶಿವರಾಜ ಸಜ್ಜನರ ಕಳವಳ ವ್ಯಕ್ತಪಡಿಸಿದರು.

ರಾಜ್ಯದ ಬಿಜೆಪಿಯಲ್ಲಿ ಇಷ್ಟೆಲ್ಲಾ ನಡೆಯುತ್ತಿದ್ದರೂ ಹೈಕಮಾಂಡ್ ಏಕೆ ಸುಮ್ಮನಿದೆ? ಪಕ್ಷ ಹದಗೆಟ್ಟು ಹೋಗುತ್ತಿದ್ದರೂ ಹೈ ಕಮಾಂಡ್ ಮೋಜು ನೋಡುತ್ತಿದೆ ಎಂದು ಕಿಡಿಕಾರಿದರು.

ಶೀಘ್ರುವೇ ಹೈಕಮಾಂಡ್ ಗೊಂದಲ ಬಗೆಹರಿಸಬೇಕು. ಇಲ್ಲದಿದ್ದರೆ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

### ಬೆಂಗಳೂರಲ್ಲಿ ನಾಡಿದ್ದು ಸಮಾವೇಶ

ಬೆಂಗಳೂರಿನಲ್ಲಿ ನಾಡಿದ್ದು ದಿನಾಂಕ 4 ರಂದು ಸಮಾವೇಶ ನಡೆಸಲಾಗುವುದು. ಬೆಂಗಳೂರು ಸುತ್ತಲಿನ ಒಂಭತ್ತು ಜಿಲ್ಲೆಗಳ ನೂರಾರು ಪ್ರಮುಖ ಮಠಾಧೀಶರು, ಮುಖಂಡರು ಭಾಗವಹಿಸಲಿದ್ದಾರೆ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ತಿಳಿಸಿದರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಸಮಾವೇಶ ನಡೆಸಿದ ಬಳಿಕ ಚಿಕ್ಕ ಮಗಳೂರು, ಶಿವಮೊಗ್ಗದಲ್ಲಿ ಸಭೆ ನಡೆಸುತ್ತೇವೆ. ನಂತರ ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿಯೂ ಪ್ರವಾಸ ಮಾಡುತ್ತೇವೆ. ಬಳಿಕ ಐದು ಲಕ್ಷ ಜನರನ್ನು ಸೇರಿಸಿ ಮಹಾಸಂಗಮ ಮಾಡುತ್ತೇವೆ ಎಂದು ತಿಳಿಸಿದರು.

ಹಲವು ಮಠಾಧೀಶರು ದೂರವಾಣಿ ಕರೆ ಮಾಡಿ ಈ ಕಾರ್ಯಕ್ಕೆ ಬೆಂಬಲ ಸೂಚಿಸಿದ್ದು, ಮುಂದೆ ಇಟ್ಟ ಹೆಜ್ಜೆ ಹಿಂದಿಡದಂತೆ ತಿಳಿಸಿದ್ದಾರೆ. ಯಡಿಯೂರಪ್ಪ ಹಾಗೂ ವಿಜಯೇಂದ್ರ ಅವರು ಕರೆ ಮಾಡಿ ಸಮಾವೇಶ, ಸಭೆ ಮಾಡಬೇಡಿ ಎಂದು ಹೇಳಿದ್ದಾರೆ. ಆದರೆ, ಇದು ಸಮಾಜದ ಒಗ್ಗಟ್ಟಿಗೆ, ಸಮಾಜದೊಳಗಿರುವ ಮಲ್ಲಪ್ಪ ಶೆಟ್ಟಿಯಂಥ ದ್ರೋಹಿಗಳಿಗೆ ಎಚ್ಚರಿಕೆ ನೀಡಲು ಸಮಾವೇಶ ಮಾಡ ಲಾಗುತ್ತಿದೆ ಎಂದು ತಿಳಿಸಿದ್ದೇವೆ. ಸಮಾವೇಶಕ್ಕೆ ಯಡಿಯೂರಪ್ಪ ಅವರ ಮನೆಯಿಂದ ಒಂದು ರೂಪಾಯಿ ಕೂಡ ವೆಚ್ಚ ಮಾಡದೇ ಅವರ ಅಭಿಮಾನಿಗಳು, ಆಪ್ತರು ಸೇರಿ ಸಮಾವೇಶ ಮಾಡಿ ತೋರಿಸುತ್ತೇವೆ ಎಂದರು.

### ಸಭೆ ಸ್ಥಗಿತಕ್ಕೆ ವಿಜಯೇಂದ್ರ ಸೂಚನೆ

ಬೆಂಗಳೂರು, ಮಾ.1- 'ವೀರಶೈವ–ಲಿಂಗಾಯತ ಸಮುದಾಯದ ಹೆಸರಿನಲ್ಲಿ ಸಭೆ ಸಂಘಟಿಸುವ ಪ್ರಯತ್ನವನ್ನು ಕೂಡಲೇ ನಿಲ್ಲಿಸಬೇಕು. ಪಕ್ಷ ಸಂಘಟನೆಯತ್ತ ಗಮನ ಕೇಂದ್ರೀಕರಿಸಬೇಕು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಸೂಚನೆ ನೀಡಿದ್ದಾರೆ. ವೀರಶೈವ ಲಿಂಗಾಯತ ಸಮುದಾಯದ ಸರಣಿ ಸಭೆ ನಡೆಸಲು ಮುಂದಾಗಿರುವುದು ಗಮನಕ್ಕೆ ಬಂದಿದೆ. ಇದರಿಂದ ಪಕ್ಷಕ್ಕೆ ಮುಜುಗರದ ಸನ್ನಿವೇಶ ಸೃಷ್ಟಿಯಾಗಲಿದೆ. ಇಂತಹ ಸಭೆಗಳನ್ನು ಕೂಡಲೇ ನಿಲ್ಲಿಸಿ' ಎಂದು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

## ಬಿ-ಖಾತಾಗೆ ನಿಗದಿಪಡಿಸಿದ್ದ ಶುಲ್ಕ ರದ್ದು

### ಸಚಿವ ಎಸ್ಸೆಸ್ಸೆಂ ಸೂಚನೆ ಮೇರೆಗೆ ಆಯುಕ್ತರ ಕ್ರಮ



ದಾವಣಗೆರೆ, ಮಾ.1- ಅನಧಿಕೃತ ಬಡಾವಣೆಯ ಸೈಟ್, ಮನೆ, ಕಟ್ಟಡಗಳಿಗೆ ಡೋರ್ ನಂಬರ್ ನೀಡಲು ನಿಗದಿ ಮಾಡಿದ್ದ 10 ಸಾವಿರ ಶುಲ್ಕವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಸೂಚನೆ ಮೇರೆಗೆ ಪಾಲಿಕೆ ಆಯುಕ್ತರು ರದ್ದುಪಡಿಸಿದ್ದಾರೆ.

ಇ- ಆಸ್ತಿಯಡಿ ಬಿ-ಖಾತೆ ನೀಡಲು ಅಭಿವೃದ್ಧಿ ಮತ್ತು ಸುಧಾರಣೆಯ ಹೆಸರಲ್ಲಿ ಮಹಾನಗರ ಪಾಲಿಕೆ 10 ಸಾವಿರ ಶುಲ್ಕವನ್ನು ಪಡೆಯುತ್ತಿದೆ. ರಾಜ್ಯದ ಯಾವುದೇ ಮಹಾನಗರ ಪಾಲಿಕೆ, ಸ್ಥಳೀಯ ಸಂಸ್ಥೆಗಳಲ್ಲಿ ಅಭಿವೃದ್ಧಿ ಮತ್ತು ಸುಧಾರಣೆ ಶುಲ್ಕ ಹೆಸರಿನಲ್ಲಿ ಹೆಚ್ಚುವರಿ ಶುಲ್ಕ ಪಡೆಯುತ್ತಿಲ್ಲ ಎಂದು ನಿವೇಶನದಾರರು ಸಚಿವರ ಗಮನಕ್ಕೆ ತಂದಿದ್ದರು. (2ನೇ ಪುಟಕ್ಕೆ)

## ನಾನು ಎಲ್ಲಾ ಸಮುದಾಯಗಳ ಮುಖಂಡ: ಜಿ.ಎಂ. ಸಿದ್ದೇಶ್ವರ



ದಾವಣಗೆರೆ, ಮಾ.1- ನಾನು ಲಿಂಗಾಯತ ಸಮುದಾಯಕ್ಕೆ ಮಾತ್ರ ಸೀಮಿತವಾದ ಮುಖಂಡನಲ್ಲ, ಸರ್ವ ಧರ್ಮಗಳ ನಾಯಕ ಎಂದು ಕೇಂದ್ರದ ಮಾಜಿ ಸಚಿವ ಜಿ.ಎಂ.ಸಿದ್ದೇಶ್ವರ ಹೇಳಿದರು.

ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬೆಂಗಳೂರಿನಲ್ಲಿ ನಡೆದ ಲಿಂಗಾಯತ ಸಮುದಾಯದ ನಾಯಕರ ಸಭೆಗೆ ಆಹ್ವಾನಿಸಿದ್ದರು. ಹೀಗಾಗಿ ಹೋಗಿದ್ದೆ. ಇಲ್ಲಿನ ಸಭೆಗೆ ಕರೆದಿಲ್ಲ. ನನ್ನ ಕರೆಯಲು ಅವರಿಗೆ (ಎಂ.ಪಿ.ರೇಣುಕಾಚಾರ್ಯ) ಧಮ್ ಬೇಕು. ಆಕಾಶ ನೋಡಲು ನೂಕುನುಗ್ಗಲು ಯಾಕೆ' ಎಂದು ಹೇಳಿದರು.

15 ದಿನಗಳಲ್ಲಿ ಬಿಜೆಪಿ ರಾಜ್ಯ ಘಟಕದ (5ನೇ ಪುಟಕ್ಕೆ)

## ಕೆರೆಗಳ ಅಭಿವೃದ್ಧಿಗಾಗಿ 9.33 ಕೋಟಿ ರೂ., ಹೊಸ ಬಡಾವಣೆ ಅಭಿವೃದ್ಧಿಗೆ 100 ಕೋಟಿ ರೂ.



ದಾವಣಗೆರೆ, ಮಾ.1 - ಭೂ ಸ್ವಾಧೀನ ವ್ಯಾಜ್ಯಗಳ ಪರಿಹಾರದ ಸಂಬಂಧ ರೂ. 80 ಕೋಟಿ ವೆಚ್ಚ, ಹೊಸ ಬಡಾವಣೆ ನಿರ್ಮಾಣ ಮಾಡಲು ರೂ.100 ಕೋಟಿ ರೂಪಾಯಿಗಳನ್ನು ದಾವಣಗೆರೆ – ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ಕಾಯ್ದಿರಿಸಲಾಗಿದೆ.

ಶೇ.25ರಷ್ಟು ಕೆರೆ ಅಭಿವೃದ್ಧಿ ಶುಲ್ಕ ಸರ್ಕಾರಕ್ಕೆ ಪಾವತಿ ಮಾಡಬೇಕಾದ ಮೊತ್ತ ರೂ.62.50 ಲಕ್ಷಗಳನ್ನು ಕಾಯ್ದಿರಿಸಲಾಗಿದೆ. 2024-25ನೇ ಸಾಲಿಗೆ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಅಭಿವೃದ್ಧಿಗಾಗಿ ರೂ.9.33 ಕೋಟಿಗಳನ್ನು ನೀಡಲು ಉದ್ದೇಶಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರ ಅಧ್ಯಕ್ಷತೆ ಮತ್ತು ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಅವರ ಸಮ್ಮುಖದಲ್ಲಿ ಇಂದು ನಡೆದ ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ದೂಡಾ ಆಯುಕ್ತ ಹುಲ್ಮನಿ ತಿಮ್ಮಣ್ಣ ತಿಳಿಸಿದರು.

2025-26ನೇ ಸಾಲಿನಲ್ಲಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಅಭಿವೃದ್ಧಿಗಾಗಿ ರೂ.6.60 ಕೋಟಿಗಳನ್ನು ಕಾಯ್ದಿರಿಸಲಾಗಿದೆ. ಮಹಾಯೋಜನೆಯಲ್ಲಿರುವ ದಾವಣಗೆರೆ ತಾಲ್ಲೂಕು ವಡ್ಡಿನಹಳ್ಳಿ ಕೆರೆ ಅಭಿವೃದ್ಧಿಗಾಗಿ ರೂ.2.00 ಕೋಟಿ, ದಾವಣಗೆರೆ ತಾಲ್ಲೂಕು ಹೊನ್ನೂರು ಕೆರೆ ಅಭಿವೃದ್ಧಿಗಾಗಿ ರೂ.2.30 ಕೋಟಿ, ನಾಗನೂರು ಕೆರೆಯನ್ನು ಆಧುನೀಕರಣಗೊಳಿಸುವುದು. ರೂ.2.30 ಕೋಟಿ, 2024-25ನೇ ಸಾಲಿನ ಮುಂದುವರೆದ ಕಾಮಗಾರಿಗಳ ವೆಚ್ಚಕ್ಕಾಗಿ ರೂ.5.66 ಕೋಟಿ ಕಾಯ್ದಿರಿಸಲಾಗಿದೆ ಎಂದು ಅವರು ಹೇಳಿದರು.

### 1.3 ಕೋಟಿ ರೂ. ಉಳಿತಾಯ ಬಜೆಟ್ ಮಂಡಿಸಿದ ದೂಡಾ

2025-26ನೇ ಸಾಲಿನ ಹೊಸ ಕಾಮಗಾರಿಗಳ ವೆಚ್ಚಕ್ಕಾಗಿ ರೂ.3.30 ಕೋಟಿಗಳನ್ನು ಕಾಯ್ದಿರಿಸಲಾಗಿದೆ. ಮಹಾಯೋಜನೆಯಲ್ಲಿರುವ ದಾವಣಗೆರೆ ನಗರದ ಶ್ರೀ ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿರುವ ಅಮರ್ ಜವಾನ್ ಉದ್ಯಾನವನದಲ್ಲಿ ಯೋಗಾ ಪ್ಲಾಟ್ ಫಾರಂ ನಿರ್ಮಿಸಿ, ಜಿಮ್ ಸಾಮಗ್ರಿಗಳನ್ನು ಅಳವಡಿಸುವ ಕಾಮಗಾರಿಗೆ ರೂ. 25 ಲಕ್ಷ, ಹರಿಹರ ತಾಲ್ಲೂಕು ಅಮರಾವತಿ ಗ್ರಾಮದ ರಿಸನಂ:45 ಮತ್ತು 46 ರಲ್ಲಿರುವ ಉದ್ಯಾನವನವನ್ನು ಅಭಿವೃದ್ಧಿಗೆ ರೂ.1.00 ಕೋಟಿ, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಬರುವ ಬಸವೇಶ್ವರ ಬಡಾವಣೆಯ ಡಬಲ್ ರಸ್ತೆಯ ಪಕ್ಕದಲ್ಲಿ ಕುಂದುವಾಡ ರಿ.ಸ.ನಂ: (2ನೇ ಪುಟಕ್ಕೆ)

## ಅಚ್ಚುಕಟ್ಟು ಕೊನೆ ಭಾಗಕ್ಕೆ ನೀರು ಪೂರೈಸಲು ಕ್ರಮ

### ಭದ್ರಾ ಅಚ್ಚುಕಟ್ಟು ಪ್ರದೇಶದ ರೈತರೊಂದಿಗೆ ನಡೆದ ಸಭೆಯಲ್ಲಿ ಜಿಲ್ಲಾಧಿಕಾರಿ ಭರವಸೆ



ದಾವಣಗೆರೆ, ಮಾ. 1- ಭದ್ರಾ ಜಲಾಶಯದ ಕಾಲುವೆ ಮೂಲಕ ಬಿಡುವ ನೀರು ಕೊನೆ ಭಾಗದ ಅಚ್ಚುಕಟ್ಟು ದಾರರಿಗೂ ತಲುಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದೆಂದು ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ ಜಿ.ಎಂ ತಿಳಿಸಿದರು.

ಶನಿವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಆಯೋಜಿಸಲಾಗಿದ್ದ ಭದ್ರಾ ಅಚ್ಚುಕಟ್ಟು ಪ್ರದೇಶದ ರೈತರೊಂದಿಗೆ ನಡೆಸಿದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಭದ್ರಾ ಜಲಾಶಯದಿಂದ ಅಚ್ಚುಕಟ್ಟು ದಾರರಿಗೆ ನೀರು ಹರಿಸಿ ಒಂದೆರಡು ದಿನಗಳಲ್ಲಿ ನಿಮ್ಮ ಸಮಸ್ಯೆಯನ್ನು ಬಗೆಹರಿಸುತ್ತೇನೆ ಎಂದು ರೈತರಿಗೆ ಭರವಸೆ ನೀಡಿದರು. ಕಾಲುವೆಗಳಿಗೆ ಅನಧಿಕೃತವಾಗಿ ಪಂಪ್ ಅಳವಡಿಸಿ ನೀರೆತ್ತಲಾಗುತ್ತಿದೆ, ಇದರಿಂದ ಕೊನೆ ಭಾಗದ ರೈತರಿಗೆ ನೀರು ಸಿಗುತ್ತಿಲ್ಲ. ಅನಧಿಕೃತ ಪಂಪ್ ಗಳನ್ನು ತೆರವು ಮಾಡಿ ವಿದ್ಯುತ್ ಸಂಪರ್ಕವನ್ನು ಕಡಿತ ಮಾಡಲಾಗುತ್ತದೆ ಎಂದರು.

ಬೇಸಿಗೆಯಾಗಿರುವುದರಿಂದ ಗೇಟ್ ಗಳಲ್ಲಿ ನೀರಿನ ಸೋರಿಕೆ ಮತ್ತು ಕಾಲುವೆ ದುರಸ್ತಿಗೆ ಅಗತ್ಯ ಅನುದಾನ ಬಿಡುಗಡೆಗೆ ಸರ್ಕಾರಕ್ಕೆ ಕಳುಹಿಸಲಾಗುತ್ತದೆ ಎಂದು ರೈತರಿಗೆ ತಿಳಿಸಿದರು. ಕಾಲುವೆಗಳ ನೀರು ನಿರ್ವಹಣೆಗೆ ಸಿಬ್ಬಂದಿಗಳ ಕೊರತೆ ಇದ್ದು, ಈ ಸಮಸ್ಯೆಯನ್ನು ಬಗೆಹರಿಸಲು ಅಧೀಕ್ಷಕ ಇಂಜಿನಿಯರ್ ಗೆ ಸೂಚಿಸಿದರು.

ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಜಲಾಶಯದ ದುರಸ್ತಿ ಮಾಡಿಸಿ, ಭದ್ರಾ ಇಂಜಿನಿಯರ್‌ಗಳು ವೈಜ್ಞಾನಿಕ ತಂತ್ರಜ್ಞಾನ ಬಳಸಿ ನೀರು ಪೋಲಾಗದಂತೆ ಕ್ರಮ ತೆಗೆದುಕೊಳ್ಳಬೇಕೆಂದರು. ಭದ್ರಾ ನಾಲೆ ಅಚ್ಚುಕಟ್ಟು ಪ್ರದೇಶದ ಬಹುತೇಕ ಭಾಗಗಳಲ್ಲಿ ನೀರಾವರಿ ಕಟ್ಟಡ ಹಾಗೂ ನಾಲೆಯ ಗೇಟ್‌ಗಳು ಹಾಳಾಗಿವೆ. ಆದ್ದರಿಂದ ನೀರು ಹೆಚ್ಚಿನ ಪ್ರಮಾಣದಲ್ಲಿ ಪೋಲಾಗುತ್ತಿದೆ ಎಂದು ವಿವರಿಸಿದರು.

ಸಿಬ್ಬಂದಿ ಕೊರತೆಯಿಂದ ಬಸವಾಪಟ್ಟಣ ಕೊನೆ ಭಾಗಕ್ಕೆ ನೀರು ತಲುಪಿಲ್ಲ ಎಂದು ಎಇಇ ಧನಂಜಯ ಸ್ಪಷ್ಟನೆ ನೀಡಿದರು.

ಭದ್ರಾ ಜಲಾಶಯದಿಂದ ನೀರು ಹರಿಸಿ 50 ದಿನ ಕಳೆದಿದೆ, ಇನ್ನೂ 70 ದಿನ ಮಾತ್ರ ಬಾಕಿ ಉಳಿದಿದೆ. ಕೊನೆ ಭಾಗದ ಅಚ್ಚುಕಟ್ಟು ಪ್ರದೇಶಗಳಾದ ಮಲೇಬೆನ್ನೂರು, ಬಸವಾಪಟ್ಟಣದ ರೈತರ ಜಮೀನುಗಳಿಗೆ ನೀರು ಇನ್ನೂ ತಲುಪಿಲ್ಲ. ಭದ್ರಾ ಜಲಾಶಯದ ನೀರು ಜಿಲ್ಲೆಯ ಜೀವನಾಡಿಯಾಗಿದ್ದು, ಈ ನೀರು ನಂಬಿ ಲಕ್ಷಾಂತರ ಎಕರೆ ಭೂಮಿಯಲ್ಲಿ ರೈತರು ಬೆಳೆ ಬೆಳೆಯುತ್ತಿದ್ದಾರೆ.

ತಿಂಗಳು ಸಮೀಪವಾದರೂ ಭದ್ರಾ ಅಚ್ಚುಕಟ್ಟು ಪ್ರದೇಶಕ್ಕೆ ನೀರು ಬರುತ್ತಿಲ್ಲ. ಭದ್ರಾ ಜಲಾಶಯದ ನೀರನ್ನು ನಂಬಿ ಭತ್ತ ನಾಟಿ ಮಾಡಿರುವ ಲಕ್ಷಾಂತರ ರೈತರು ನೀರಿಗಾಗಿ ಕಾದು ಕುಳಿತಿದ್ದಾರೆ. ಮಲೇಬೆನ್ನೂರಿನ ಕೊನೆ ಭಾಗದ ರೈತರು ಸೇರಿದಂತೆ ಹತ್ತಾರು ಹಳ್ಳಿಗಳು ನೀರಿನ ದಾರಿ ಕಾಯುತ್ತಿವೆ. ತಿಂಗಳು ಸಮೀಪವಾದರೂ ಈ ಪ್ರದೇಶಕ್ಕೆ ನೀರು ಬರುತ್ತಿಲ್ಲ ಎಂದು ರೈತರು ಆಕ್ರೋಶ ವ್ಯಕ್ತ ಪಡಿಸಿದರು.

ಅಪರ ಜಿಲ್ಲಾಧಿಕಾರಿ ಪಿ.ಎನ್ ಲೋಕೇಶ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಮಂಜುನಾಥ, ಜಿಲ್ಲಾ ಯೋಜನಾ ನಿರ್ದೇಶಕ ಮಹಾಂತೇಶ್ ಉಪಸ್ಥಿತರಿದ್ದರು.

## ಸಾಲಗಾರ ಗ್ರಾಹಕನಲ್ಲ : ಸುಪ್ರೀಂ ಕೋರ್ಟ್

### ಲಾಭದ ಉದ್ದೇಶಕ್ಕಾಗಿ ಸಾಲ ಪಡೆದರೆ ಅದು ಗ್ರಾಹಕರ ರಕ್ಷಣಾ ಕಾಯ್ದೆಗೆ ಬರದು

ನವದೆಹಲಿ, ಮಾ. 1 - ಸಾಲ ಪಡೆದ ವ್ಯಕ್ತಿಯನ್ನು ಗ್ರಾಹಕ ಎಂದು ಪರಿಗಣಿಸ ಲಾಗದು. ಲಾಭಗಳಿಸುವ ಉದ್ದೇಶಕ್ಕಾಗಿ ಬ್ಯಾಂಕಿನಿಂದ ಸಾಲ ಪಡೆದ ವ್ಯಕ್ತಿ ಗ್ರಾಹಕರ ರಕ್ಷಣಾ ಕಾಯ್ದೆಯಡಿ ಬರುವುದಿಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ನ್ಯಾಯಮೂರ್ತಿಗಳಾದ ಸುಧಾಂಶು ಧುಲಿಯ ಹಾಗೂ ಪ್ರಶಾಂತ್ ಕುಮಾರ್ ಮಿಶ್ರ ಅವರನ್ನು ಒಳಗೊಂಡ ಪೀಠ ಈ ನಿಲುವು ತಡೆದಿದೆ.

ರಾಷ್ಟ್ರೀಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ (ಎನ್‌ಸಿಡಿಆರ್‌ಸಿ) ನೀಡಿದ ಆದೇಶವನ್ನು ಪ್ರಶ್ನಿಸಿ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ದಾಖಲಿಸಿದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯ ಈ ತೀರ್ಪು ನೀಡಿದೆ.

ಆಡ್ ಬ್ಯೂರೋ ಅಡ್ವರ್ಟೈಸಿಂಗ್ ಪ್ರೈವೇಟ್ ಲಿಮಿಟೆಡ್ ಕಂಪನಿ ಸಾಲ ಬಾಕಿದಾರನಾಗಿದೆ ಎಂದು ಸಿಬಿಲ್‌ಗೆ ಬ್ಯಾಂಕ್ ತಪ್ಪಾಗಿ ವರದಿ ನೀಡಿತ್ತು. ಇದಕ್ಕಾಗಿ 75 ಲಕ್ಷ ರೂ. ಪರಿಹಾರ ನೀಡಬೇಕು ಎಂದು ಎನ್‌ಸಿಡಿಆರ್‌ಸಿ ಆದೇಶಿಸಿತ್ತು.

ನಟ ರಜನಿಕಾಂತ್ ಅವರ 'ಕೊಚ್ಚಾಡಿಯನ್' ಚಲನಚಿತ್ರಕ್ಕಾಗಿ ಆಡ್ ಬ್ಯೂರೋ ಸಂಸ್ಥೆಯು ಸೆಂಟ್ರಲ್ ಬ್ಯಾಂಕ್‌ನಿಂದ 10 ಕೋಟಿ ರೂ. ಸಾಲ ಪಡೆದಿತ್ತು.

ಈ ಸಾಲ ಮರುಪಾವತಿ ಆಗಿರಲಿಲ್ಲ. ನಂತರ ಸಾಲ ವಸೂಲಿ ಟ್ರಿಬ್ಯೂನಲ್ ಈ ವಿಷಯವನ್ನು 3.56 ಕೋಟಿ ರೂ.ಗಳ ಒಂದು ಬಾರಿಯ ಇತ್ಯರ್ಥದೊಂದಿಗೆ ಬಗೆಹರಿಸಿತ್ತು.

ಇದಾದ ನಂತರವೂ ತಾನು ಸಾಲ ಬಾಕಿ ಹೊಂದಿರುವುದಾಗಿ ಸಿಬಿಲ್‌ಗೆ ಬ್ಯಾಂಕ್ ತಿಳಿಸಿದೆ. ಇದರಿಂದಾಗಿ ಪ್ರತಿಷ್ಠೆ ಹಾಗೂ ಉದ್ಯಮಕ್ಕೆ ಹಾನಿಯಾಗಿದೆ ಎಂದು ಆಡ್ ಬ್ಯುರೋ ಎನ್‌ಸಿಡಿಆರ್‌ಸಿನಲ್ಲಿ ಅರ್ಜಿ ದಾಖಲಿಸಿತ್ತು.

# ವಾರ ಭವಿಷ್ಯ

**ದಿನಾಂಕ : 02.03.2025 ರಿಂದ 08.03.2025ರ ವರೆಗೆ**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಲು.ಲೇ.ಲೊ.ಅ.)**

ಮಾಡುತ್ತಿರುವ ವ್ಯಾಪಾರ, ವ್ಯವಹಾರಗಳಲ್ಲಿ ಈ ವಾರ ತುಸು ಹಿನ್ನಡೆಯಾಗಲಿದೆ. ಹಾಗೆಂದ ಮಾತ್ರಕ್ಕೆ ಚಿಂತೆ ಬೇಡ, ಹೆಚ್ಚಿನ ಪ್ರಯಾಣ ಮಾಡಬೇಕಾದ ಪ್ರಸಂಗ, ಆದರೆ ಅದಕ್ಕೆ ಬೇಕಾದ ಪೂರ್ವಸಿದ್ಧತೆ ಸರಿಯಾಗಿ ರಲಿ, ತಿಳಿಯದ ವಹಿವಾಟಿನಲ್ಲಿ ಹೂಡಿದ ಬಂಡವಾಳದಲ್ಲಿ ತುಸು ನಷ್ಟವಾಗಲಿದೆ. ಮಗನು ವಿದೇಶದಲ್ಲಿ ಅಧ್ಯಯನಮಾಡಬೇಕೆಂಬ ಹಂಬಲಕ್ಕೆ ಮನೆಯವರ ಬೆಂಬಲ ದೊರೆಯಲಿದೆ. ಪೂರ್ವಯೋಜಿತ ಕಾರ್ಯಗಳಲ್ಲಿ ರಾಜಕಾರಣಿಗಳ ಪ್ರವೇಶದಿಂದಾಗಿ ಒಂದು ಹಂತಕ್ಕೆ ಬರಲಿದೆ. ಹಿರಿಯರ ಭಾವನೆಗಳನ್ನು ಗೌರವಿಸಿ. ಹಣಕಾಸಿನ ಸ್ಥಿತಿ ಉತ್ತಮ. ಭಾನು-ಮಂಗಳ-ಬುಧ-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ನಿಮ್ಮ ನಡೆ ನುಡಿ ಮೊದಲಾದವುಗಳನ್ನು ಮೊದಲಿನಿಂದಲೂ ಗಮನಿಸುತ್ತಿರುವ ಹಿರಿಯರು ಮೆಚ್ಚುಗೆ ಮಾತನ್ನಾಡಲಿದ್ದಾರೆ. ಹಾಗೆಂದ ಮಾತ್ರಕ್ಕೆ ನಿಮ್ಮ ಕರ್ತವ್ಯಕ್ಕೆ ಚ್ಯುತಿಬಾರದಂತೆ ಎಚ್ಚರವಹಿಸಿ. ಆದಾಯವು ಮಧ್ಯಗತಿಯಲ್ಲಿರುವುದರಿಂದ ಯಾವುದೇ ವಿಷಯದಲ್ಲಿ ಹೆಚ್ಚಿನ ನಿರೀಕ್ಷೆ ಬೇಡ.ವಿದ್ಯಾರ್ಥಿಗಳು ಅಧ್ಯಯನದ ವಿಷಯದಲ್ಲಿ ಆಲಸ್ಯತನ ಬಿಡುವುದು ಮೇಲು.ಕೃಷಿ ಭೂಮಿಯನ್ನು ಹೆಚ್ಚು ಅಭಿವೃದ್ಧಿ ಪಡಿಸಲು ಇದು ಸಕಾಲವಾಗಿದೆ. ಹಾಗೂ ಹೆಚ್ಚಿನ ಆದಾಯವನ್ನು ನಿರೀಕ್ಷಿಸಬಹುದು ಔಷಧಿ-ವ್ಯಾಪಾರಿಗಳಿಗೆ ವಹಿವಾಟು ಹೆಚ್ಚಿ, ಲಾಭವಾಗಲಿದೆ. ಅವಿವಾಹಿತರಿಗೆ ಕಂಕಣಭಾಗ್ಯ ಕೂಡಿಬರಲಿದೆ. ಗೋ ಸೇವೆ ಮಾಡಿ. ಸೋಮ-ಶುಕ್ರ-ಶನಿ-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘು, ಔ, ಚ.ಕೆ.ಕೋ.ಹ.)**

ಸಾಂಪ್ರದಾಯಿಕ ಕೃಷಿ ಮಾಡುವವರಿಗೆ ಕೃಷಿ ಇಲಾಖೆಯಿಂದ ಸೂಕ್ತ ಸಲಹೆ ಸಿಗಲಿದೆ. ಆದಾಯವು ನಿರೀಕ್ಷೆ ಮಟ್ಟದಲ್ಲಿರದಿದ್ದರೂ ಅದರಹತ್ತಿರಕ್ಕೆ ಬರಲಿದೆ. ಖಾಸಗಿ ಕಂಪನಿಯಲ್ಲಿರುವವರಿಗೆ ಪದೋನ್ನತಿಯಾಗಲಿದೆ. ಜೊತೆಗೆ ವೇತನದಲ್ಲಿ ಹೆಚ್ಚಳವಾಗಲಿದೆ. ಕೆಲವು ವಿಷಯಗಳಲ್ಲಿ ಸಂಗಾತಿಯ ಸಲಹೆ ತೆಗೆದುಕೊಳ್ಳುವುದು ಮೇಲು, ಕಟ್ಟಡದ ನಿರ್ಮಾಣದಲ್ಲಿ ಕೆಲಸಮಾಡುವವರು ಹೆಚ್ಚಿನ ಸುರಕ್ಷತೆಯಿಂದಿರುವುದು ಮೇಲು, ವ್ಯಾಪಾರ ನಿಮಿತ್ತ ಕೆಲಕಾಲ ವಾಸ ಸ್ಥಳದಿಂದ ದೂರವಿರಬೇಕಾಗಬಹುದು. ವೈಯಕ್ತಿಕ ಆರೋಗ್ಯವನ್ನು ಯಾವುದೇ ಕಾರಣಕ್ಕೂ ಅಲಕ್ಷಿಸಬೇಡಿ. ಬುಧ-ಗುರು-ಶುಕ್ರ-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ವಿದ್ಯಾರ್ಥಿಗಳ ಉನ್ನತ ಭವಿಷ್ಯದ ಬಗ್ಗೆ ಬರೀ ಕನಸು ಕಾಣುವುದರಿಂದ ಏನೂ ಪ್ರಯೋಜನವಿಲ್ಲ, ಅದಕ್ಕೆ ತಕ್ಕಂತೆ ಪ್ರಯತ್ನಮಾಡುವುದು ಉತ್ತಮ.ನಿಮ್ಮ ಒಂದು ಉದಾಸೀನತೆ ಹತ್ತು ಹಲವು ಕೆಲಸಗಳ ಮುಂದೂಡಿಕೆಗೆ ಕಾರಣವಾಗಲಿದೆ. ಮನೆಯಲ್ಲಿ ನಡೆಯಬೇಕಾಗಿರುವ ಮಂಗಳ ಕಾರ್ಯಗಳಿಗೆ ಹಲವು ವಿಘ್ನಗಳು, ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿ ರುವ ಮನೆಯ ಹಿರಿಯರಿಗೆ ನೆರವಾಗುವಿರಿ, ಮದುವೆಯಾಗಲಿರುವ ಗೆಳೆಯನಿಗೆ ನಿಮ್ಮಿಂದ ಹೆಚ್ಚಿನ ನೈತಿಕ ಬೆಂಬಲ ದೊರೆಯಲಿದೆ. ಶ್ರಮಿಕರು ತುಸು ಎಚ್ಚರದಿಂದ ಕೆಲಸಮಾಡುವುದು ಮೇಲು. ಭಾನು-ಸೋಮ-ಗುರು-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಕುಟುಂಬಕ್ಕೆ ಸಂಬಂಧಿಸಿದ ಪ್ರಮುಖನಿ ರ್ಧಾರಗಳನ್ನು ತೆಗೆದುಕೊಳ್ಳುವ ಮೊದಲು ಯಾರು ಏನೇ ಹೇಳಿದರೂ ಅಂತಿಮ ತೀರ್ಮಾನ ನಿಮ್ಮದೇ ಆಗಿರಲಿ. ಕಡಿಮೆ ಆದಾಯ ನಿಮ್ಮ ಕೆಲವು ಕನಸುಗಳಿಗೆ ತಣ್ಣೀರೆರಚಬಹುದು, ಹಾಗೆಂದ ಮಾತ್ರಕ್ಕೆ ಪ್ರಯತ್ನವನ್ನು ಬಿಡಬೇಡಿ. ವೃತ್ತಿಯಲ್ಲಿ ಚುರುಕುತನ ಕಂಡುಬರಲಿದೆ. ಮಕ್ಕಳ ಅಭಿವೃದ್ಧಿಯಲ್ಲಿ ಸಾಕಷ್ಟು ಪ್ರಗತಿ ಕಂಡುಬರಲಿದೆ.ದಂಪತಿಗಳಲ್ಲಿ ಕುಟುಂಬಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ಭಿನ್ನಾಭಿಪ್ರಾಯ ಮೂಡಲಿದ್ದು, ಅದನ್ನು ಸಂಘರ್ಷಣೆ ಎಡೆಮಾಡಿ ಕೊಡದಂತೆ ಅಥವಾ ದಾಂಪತ್ಯದಲ್ಲಿ ಬಿರುಕು ಮೂಡದಂತೆ ಎಚ್ಚರ ವಹಿಸುವುದು ಉತ್ತಮ. ಭಾನುಬುಧ-ಗುರು-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ವಾರದಿಂದ ವಾರಕ್ಕೆ ಕುಸಿಯುತ್ತಿರುವ ಆದಾಯವು ನಿಮ್ಮನ್ನು ಆಲಸ್ಯತನಕ್ಕೆ ದೂಡಬಹುದು, ದೈನಂದಿನ ನಿರ್ವಹಣಾ ದೃಷ್ಟಿಯಿಂದ ಹೆಚ್ಚು ಚುರುಕುತನವನ್ನು ರೂಢಿಸಿಕೊಳ್ಳುವುದು ಮೇಲು. ಮಕ್ಕಳ ಭವಿಷ್ಯದ ಚಿಂತೆ ನಿಮ್ಮನ್ನು ಕಾಡಲಿದೆ, ಗೊತ್ತು ಗುರಿಯಿಲ್ಲದ ಸಂಚಾರ ಆರೋಗ್ಯದ ಮೇಲೆ ಹೆಚ್ಚಿನ ಅಡ್ಡ ಪರಿಣಾಮ ಬೀರಬಹುದು, ಮಡದಿಗೆ ಕಾಲು ನೋವು ಅಥವಾ ರಕ್ತಸಂಬಂಧಿ ಅನಾರೋಗ್ಯ ಕಾಡಲಿದೆ. ವಿದೇಶದಲ್ಲಿರುವ ಸೋದರನಿಂದ ಹೆಚ್ಚು ಅಲ್ಲದಿದ್ದರೂ ತಕ್ಕಮಟ್ಟಿಗೆ ನೆರವು ಸಿಗಲಿದೆ, ಹಳೇ ದಾಖಲೆಗಳನ್ನು ಜೋಪಾನವಾಗಿ ಕಾಪಾಡಿಕೊಳ್ಳಿ, ಗುರುಗಳನ್ನು ಆರಾಧಿಸಿ. ಮಂಗಳ-ಬುಧ-ಗುರು-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಅನಿರೀಕ್ಷಿತ ಎಂಬಂತೆ ವಿನಾಕಾರಣ ವಿದೇಶ ವ್ಯಾಮೋಹ ನಿಮ್ಮನ್ನು ಆವರಿಸಿಕೊಳ್ಳಲಿದೆ. ಹಿರಿಯರು ಆಸ್ತಿ ಪಾಲುದಾರಿಕೆ ವಿಚಾರವನ್ನು ಕೈಗೆತ್ತಿಕೊಳ್ಳುವರು, ಈ ಪ್ರಸಂಗ ಬಂದಾಗ ತುಸು ಜಾಣತನದಿಂದ ವರ್ತಿಸಿ.ವೈದ್ಯಕೀಯ ಕ್ಷೇತ್ರದಲ್ಲಿರುವ ಮಗನಿಗೆ ದೇಶ-ವಿದೇಶಗಳಿಂದ ಹೆಚ್ಚಿನ ಬೇಡಿಕೆ ಬರಲಿದೆ. ಯಾರಿಂದಲೇ ಆಗಲಿ ಹೆಚ್ಚಿನ ನಿರೀಕ್ಷೆಬೇಡ, ಕೊನೆಗೆ ನಿರಾಶೆಯುಂಟಾಗಬಹುದು. ಹೊಸದಾಗಿ ಕೃಷಿ ಕ್ಷೇತ್ರದಲ್ಲಿ ತೊಡಗಿ ಕೊಂಡವರಿಗೆ ಅನುಭವಿಗಳಾದ ಹಿರಿಯ ಕೃಷಿಕರಿಂದ ಹೆಚ್ಚಿನ ನೆರವು ದೊರೆಯಲಿದೆ. ಮಹಿಳೆಯರಿಗೆ ಉತ್ತಮದಿನಗಳು. ಸೋಮ-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಕೆಲಸ ಕಾರ್ಯಗಳು ಯಾವುದೇ ಇರಲಿ ಅದರ ಬಗ್ಗೆ ನಿಮ್ಮ ಇತಿ-ಮಿತಿಯ ಅರಿವು ನಿಮಗಿರಿವುದು ಮೇಲು. ಅವರಿವರ ಬಗ್ಗೆ ಕುಹಕ ಮಾತುಗಳನ್ನಾಡುವುದ ರಿಂದ ನಿಮ್ಮ ಯೋಗ್ಯತೆಯ ಪರಿಚಯ ಸಮಾಜಕ್ಕಾಗಲಿದೆ, ಗುತ್ತಿಗೆದಾರರಿಗೆ ಸರ್ಕಾರದಿಂದ ಬರಬೇಕಾಗಿರುವ ಬಾಕಿ ಹಣ ಇಷ್ಟರಲ್ಲೇ ಸಂದಾಯವಾಗಲಿದ್ದು, ಉತ್ತಮ ಅವಕಾಶಗಳು ದೊರೆಯಲಿವೆ. ಮಕ್ಕಳಿಗೆ ಆಸ್ತಿ ಮಾಡುವುದಕ್ಕಿಂತ ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿ. ವಿದೇಶದಲ್ಲಿ ಭವಿಷ್ಯ ಕಟ್ಟಿಕೊಳ್ಳಬಯಸು ವವರು ಅಲ್ಲಿಯ ಸ್ಥಿತಿಗತಿಯನ್ನು ಮೊದಲು ಅರಿಯುವುದು ಮೇಲು. ಅನ್ನದಾನ ಮಾಡುವುದು ಉತ್ತಮ. ಭಾನು-ಮಂಗಳ-ಗುರು-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ನಿಮಗೆ ಹಣಕಾಸಿನ ತೊಂದರೆಯಿದ್ದರೂ ಕೂಡ ದೈನಂದಿನ ಜೀವನಕ್ಕೇನೂ ಕೊರತೆಯಿಲ್ಲ, ಬದುಕನ್ನು ಆನಂದಿಸುವುದನ್ನು ನಿಮ್ಮನ್ನು ನೋಡಿ ಬೇರೆಯವರು ಕಲಿಯಬೇಕು, ಬೇರೆಮೂಲಗಳಿಂದ ಬರಬೇಕಾಗಿರುವ ಆದಾಯವು ತುಸು ತಡವಾಗಲಿದೆ. ಅಧ್ಯಾಪಕ ವರ್ಗಕ್ಕೆ ಇಲಾಖೆಗೆ ಸಂಬಂಧಿಸಿದ ಹಲವು ಸಂಕಷ್ಟಗಳು ಎದುರಾಗಲಿವೆ. ಧೈರ್ಯ, ತಾಳ್ಮೆ ಹಾಗೂ ಜಾಣ್ಮೆಯಿಂದ ಅವುಗಳನ್ನು ಎದುರಿಸಬೇಕಷ್ಟೇ. ವಿದೇಶದಲ್ಲಿ ಆಸ್ತಿ ಮಾಡಲು ಇದು ಸಕಾಲವಾಗಿದ್ದು, ದಾಖಲೆಗಳ ಪರಿಶೀಲನೆ ಮತ್ತೆಮಾಡುವುದು ಉತ್ತಮ ನಿರ್ಧಾರವಾಗಲಿದೆ. ಮತ್ತೊಬ್ಬರ ಬದುಕಿನಲ್ಲಿ ನಿಮ್ಮ ಪ್ರವೇಶಬೇಡ. ಬುಧ-ಗುರು-ಶನಿ-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಪರಿಸ್ಥಿತಿ ಏನೇಯಾಗಿದ್ದರೂ ಅಥವಾ ಹೇಗೇ ಇದ್ದರೂ ಅದನ್ನು ಜಾಣ್ಮೆಯಿಂದ ನಿಭಾಯಿಸುವ ಕಲೆ ನಿಮಗೀಗಾಲೇ ಸಾಕಷ್ಟು ಕರಗತವಾಗಿದೆ. ಹೆಚ್ಚಿನ ಬುದ್ಧಿವಂತಿಕೆಯನ್ನು ಬಳಸಿ ಸಂಪಾದನೆಯನ್ನು ಹೆಚ್ಚಿಸಿಕೊಳ್ಳುವಿರಿ, ಆದರೆ ಖರ್ಚೂ ಕೂಡ ಅಷ್ಟೇಯಿರುವುದ ರಿಂದ ಬಹುಶಃ ಉಳಿತಾಯದ ಮಾತು ತುಸು ದೂರವಾಗಬಹುದು.ಆಸ್ತಿ ವ್ಯವಹಾರ ಮಾಡುವವರಿಗೆ ಹಣಕಾಸಿನ ಹರಿವಿನಲ್ಲಿ ಕೊರತೆ ಕಂಡುಬರಲಿದೆ, ಆತ್ಮೀಯರ ಅಗಲಿಕೆ ನಿಮ್ಮ ಕೊರಗಿಗೆ ಕಾರಣವಾಗಲಿದೆ. ಮತ್ತೊಬ್ಬರ ಹಣಕಾಸಿನ ವ್ಯವಹಾರಕ್ಕೆ ಜಾಮೀನಾಗಲು ಹೋದಲ್ಲಿ ಅಪಾಯ ತಪ್ಪಿದ್ದಲ್ಲ. ಗುರುಗಳನ್ನು ಆರಾಧಿಸಿ. ಸೋಮ-ಗುರು-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಹಿರಿಯರು ತಾವು ಮಾಡಲಿರುವ ಸಾಮಾಜಿಕ ಸೇವೆ ನಿಮ್ಮ ವ್ಯವಹಾರದಲ್ಲಿ ಸಾಕಷ್ಟು ಪ್ರಭಾವ ಬೀರಲಿದೆ. ಮತ್ತು ಅದರ ಫಲಾನುಭವಿಗಳು ನೀವಾಗುವಿರಿ. ಕುಸಿದಿದ್ದ ಆದಾಯದಲ್ಲಿ ಈ ವಾರ ತುಸು ಚೇತರಿಕೆ ಕಾಣಲಿದೆ ಆಸ್ತಿ ಖರೀದಿಗೆ ಉತ್ತಮ ದಿನಗಳಾಗಿದ್ದರೂ, ಅದಕ್ಕೆ ಬೇಕಾದ ಆರ್ಥಿಕ ಮೂಲವನ್ನು ಕಂಡುಕೊಳ್ಳುವುದು ಮೇಲು.ವಿದ್ಯಾರ್ಥಿಗಳು ನಿರೀಕ್ಷೆಗೆ ಮೀರಿ ಉತ್ತಮ ಫಲಿತಾಂಶವನ್ನು ಪಡೆಯುವರು, ಹರಿತವಾದ ಆಯುಧಗಳೊಂದಿಗೆ ಕೆಲಸ ಮಾಡುವವರು ಸಾಕಷ್ಟು ಎಚ್ಚರದಿಂದಿರುವುದು ಮೇಲು, ಸಾಧು ಸಂತರ ಸೇವೆ ಮಾಡುವುದು ಉತ್ತಮ. ಗುರು-ಶುಕ್ರ-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ವಾಸ್ತವಿವಕ್ಕಿಂತ ಅಲಂಕಾರಿಕ ಮಾತುಗಳಿಗೆ ಮನಸೋಲುವ ನಿಮ್ಮನ್ನು ಯಾರುಬೇಕಾ ದರೂ ಮೋಸಗೊಳಿಸಬಹುದು, ಇದು ತುಸು ಗಂಭೀರವಾಗಿ ಆಲೋಚಿಸಬೇಕಾದ ವಿಷಯ. ಉಂಟಾಗಲಿರುವ ನಷ್ಟ ನಿಮ್ಮನ್ನು ಸರಿದಾರಿಗೆ ತರಲಿದೆ. ಕಾರಣಾಂತರದಿಂದ ಅರ್ಧಕ್ಕೇ ನಿಲ್ಲಿಸಿದ್ದ ವಿದ್ಯಾಭ್ಯಾಸವನ್ನು ಮತ್ತೆ ಮುಂದುವರೆಸಲು ಅಡ್ಡಿಯೇನಿಲ್ಲ. ಸೋದರಿಯ ಮಗನ ಮದುವೆ ಮಾತುಕತೆ ನಿಮ್ಮ ನೇತೃತ್ವದಲ್ಲಿಯೇ ನಡೆಯಲಿದೆ. ತಿಳಿಯ ದಿರುವುದನ್ನು ತಿಳಿದವಗಿಂತಲೂ ತಿಳಿದವರಂತೆ ಮಾತನಾಡುವುದ ರಿಂದ ಅಪಹಾಸ್ಯಕ್ಕೀಡಾಗುವಿರಿ. ತೀರ್ಥಯಾತ್ರೆ ಮಾಡುವ ಯೋಗ ಬರಲಿದೆ. ಭಾನು-ಗುರು-ಶುಕ್ರ-ಶುಭ ದಿನಗಳು. ಗೋ ಸೇವೆ ಮಾಡಿ. ಬುಧ-ಗುರು-ಶುಕ್ರ-ಶುಭ ದಿನಗಳು.


**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80 North, 120 ಅಡಿ ರೋಡಿಗಿದೆ. 40x60 South, 40x60 ಅಕ್ಕ-ಪಕ್ಕ, 80 ಅಡಿ ರೋಡಿಗಿದೆ, 50x80 East.
ಐನಳ್ಳಿ ಚನ್ನಬಸಪ್ಪ ಏಜೆಂಟ್
**99166 12110**

**ಬೇಕಾಗಿದ್ದಾರೆ**
ಪಿಯುಸಿ ಆಗಿರುವ ಹುಡುಗರು/ಹುಡುಗಿಯರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಬಯೋಡಾಟಾ, ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ಆರ್ಚೀಸ್ ಗ್ಯಾಲರಿ
ಶರಾವತಿ ಲೇಡಿಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
ಮೊ : 96324-33166

**ಸೈಟುಗಳು ಮಾರಾಟಕ್ಕಿವೆ**
ಶಾಮನೂರು ಹತ್ತಿರ ಡಾಲರ್ಸ್ ಕಾಲೋನಿಯಲ್ಲಿ 30x56 North, 30x40 North, 40x60 North, 30x45 East, 30x40 South ಸೈಟುಗಳು ಮಾರಾಟಕ್ಕಿವೆ. Rate - 4000 ರಿಂದ 4500/- ವರೆಗೆ
ಐನಳ್ಳಿ ಚನ್ನಬಸಪ್ಪ ಏಜೆಂಟ್
**99166 12110**

**ಸೈಟ್‌ಗಳು ಮಾರಾಟಕ್ಕಿವೆ**
MCC ಬಿ ಬ್ಲಾಕ್, 40x60, 40x60, 17x60 ಕಮರ್ಷಿಯಲ್ ಕುವೆಂಪು ನಗರ, 40x60, 40x60, ಬಾಲಾಜಿ ಲೇಔಟ್ 40x60, 30x50, 30x40
**ಪ್ರಶಾಂತ್ : 99643 16777**

**ಮನೆ ಮಾರಾಟಕ್ಕಿದೆ**
30x40 ಅಳತೆಯ ಗ್ರೌಂಡ್ ಫ್ಲೋರ್ 2 BHK, 1ನೇ ಮಹಡಿ 2 BHK, 2ನೇ ಮಹಡಿ ಸಿಂಗಲ್ ರೂಂ ಅಟ್ಯಾಚ್ ಬಾತ್ ರೂಂ ಮನೆ ಮಾರಾಟಕ್ಕಿದೆ. #1982/2, 6ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
**9480693506, 9449851177**

**ಮನೆ ಬಾಡಿಗೆಗೆ/ಭೋಗ್ಯಕ್ಕಿದೆ**
ಗ್ರೌಂಡ್ ಫ್ಲೋರ್ 2 BHK ಪಶ್ಚಿಮ ದಿಕ್ಕಿನ ಹಾಗೂ ಬೋರ್ ಮತ್ತು ಕಾರ್ಪೊರೇಷನ್ ನೀರಿನ ಸೌಲಭ್ಯವಿರುವ ಮನೆ ಬಾಡಿಗೆಗೆ/ಭೋಗ್ಯಕ್ಕಿದೆ ನಂ. 576. ಸತ್ಯನಿವಾಸ, 1 ನೇ ಕ್ರಾಸ್, 4ನೇ ಮೇನ್ 'ಎ' ಬ್ಲಾಕ್, ಡಿ.ಸಿ.ಎಂ. ಟೌನ್ ಶಿಪ್, ದಾವಣಗೆರೆ.
**7019427951, 9341014488**
(ಸಸ್ಯಹಾರಿಗಳಿಗೆ ಮಾತ್ರ)

**ಮನೆ ಲೀಸ್‌ಗಿದೆ (6 ಲಕ್ಷ)**
15x40 (ದಕ್ಷಿಣ) ನೆಲ ಮಹಡಿ 1 BHK ಕಾವೇರಮ್ಮ ಶಾಲೆ ಹತ್ತಿರ, ತ್ರಿಶೂಲ್ ರಸ್ತೆ, ಕೆ.ಬಿ. ಬಡಾವಣೆ, ದಾವಣಗೆರೆ.
**98440-65970**

**ಸೈಟುಗಳು ಮಾರಾಟಕ್ಕಿವೆ**
ಹಳೆ ಕುಂದವಾಡದಲ್ಲಿರುವ 29.98 ×28.93= 868 ಅಳತೆಯ (ದಕ್ಷಿಣ) ಸೈಟು ಹಾಗೂ ಹರಿಹರದ ಶೇರಾಪುರದಲ್ಲಿ (ನೌಕರ ಸಂಘದವರು ನಿರ್ಮಿಸುತ್ತಿರುವ ಲೇಔಟ್ ಹತ್ತಿರ) 40×60 (ಉತ್ತರ) KHB ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ :
**99723 43286**

**JOB OPPORTUNITY**
**Female Office Assistant**
Good in Office Work-Computer Skills, Good in Customer Dealing. Freshers can also apply B.Com., M.Com., & MBA
Contact :
**97312 18567**
send C.V-hardsoftdvg@gmail.com

**ಬೇಕಾಗಿದ್ದಾರೆ**
ಅಶ್ವಮೇಧ ಬಾರ್ & ರೆಸ್ಟೋರೆಂಟ್‌ನಲ್ಲಿ ತಂದೂರಿ, ಚೈನೀಸ್, ಇಂಡಿಯನ್ ಅನುಭವವುಳ್ಳ ಅಡುಗೆ ಭಟ್ಟರು ಬೇಕಾಗಿದ್ದಾರೆ.
ಸಂಬಳ : 25,000 ರಿಂದ 30,000 (ಅನುಭವದ ಮೇರೆಗೆ)
**74831 76531, 8548824277**

**3 BHK ಮನೆ ಬಾಡಿಗೆಗಿದೆ**
#1790/53, 5ನೇ ಕ್ರಾಸ್, ಬೂಸ್ನೂರು ಪ್ರಿಂಟಿಂಗ್ ಪ್ರೆಸ್ ಹಿಂಭಾಗ, 1ನೇ ಮಹಡಿ, SS ಲೇಔಟ್ ಎ ಬ್ಲಾಕ್, ದಾವಣಗೆರೆ.
**96320 60242**
**96638 28202**

**ವಾಹ್ ಕಾಫಿ !!**
**ರಿಚ್ ಕಾಫಿ !!**
SRK COFFEE
ಶ್ರೀ ರಾಮಕೃಷ್ಣ ಕಾಫಿ ಕಂಪನಿ
ಮಂಡಿಪೇಟೆ, ದಾವಣಗೆರೆ.
ಮೊಬೈಲ್ : 94487 27084

**ಹೆಸರು ಸ್ಪಷ್ಟೀಕರಣ**
ನಾನು ಚಂದ್ರಪ್ಪ ಶಿವಪ್ಪ ಕಂಟ್ರಾಕ್ಟರ್ ಮತ್ತು ಸುಭಾಷ್ ಶಿವಪ್ಪ ಕಂಟ್ರಾಕ್ಟರ್, ಸಾಕಿನ್ ಹಂಸಭಾವಿ, ಹಿರೇಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ ಆದ ನಾನು ಈ ಮೇಲ್ಕಂಡ ಎರಡೂ ಹೆಸರುಗಳು ನನ್ನದೇ ಆಗಿದ್ದು, ಮತ್ತೆ ಬೇರೆ ಯಾರದೂ ಅಲ್ಲ. ನನ್ನ ಶಾಲಾ ದಾಖಲೆಗಳಲ್ಲಿ ಸುಭಾಷ್ ಶಿವಪ್ಪ ಕಂಟ್ರಾಕ್ಟರ್ ಇದ್ದು ಇನ್ನು ಮುಂದೆ ನನ್ನ ವ್ಯವಹಾರಗಳಲ್ಲೂ ಹಾಗೂ ದಾಖಲೆಗಳಲ್ಲೂ ಈ ಹೆಸರಿನಿಂದ ಮುಂದುವರೆಯುತ್ತೇನೆಂದು ದಿ. : 31.7.2023ರಂದು ನೋಟರಿ ದಾವಣಗೆರೆಯವರ ಮುಂದೆ ಪ್ರಮಾಣ ಮಾಡಿದ್ದೇನೆ.
ಸಹಿ/- ಸುಭಾಷ್ ಶಿವಪ್ಪ ಕಂಟ್ರಾಕ್ಟರ್

**ವಾಣಿಜ್ಯ ಕಟ್ಟಡ ಬಾಡಿಗೆಗೆ ಇದೆ**
ನಗರದ ಎಂಸಿಸಿ 'ಬಿ' ಬ್ಲಾಕ್ ನಲ್ಲಿ ರಿಲಯನ್ಸ್ ಸ್ಮಾರ್ಟ್ ಹಾಗೂ ಪವಾರ್ ಹೋಟೆಲ್ ಮಧ್ಯದ ಜಾಗ 6800 ಚದರ ಅಡಿ ವಾಣಿಜ್ಯ (ನೆಲ ಮಳಿಗೆ ಹಾಗೂ ಮೇಲ್ಭಾವಣಿ ಸೇರಿ 5 ಅಂತಸ್ತು, lift ಸೌಲಭ್ಯವಿರುವ) ಕಟ್ಟಡ ಬಾಡಿಗೆಗೆ ಇದೆ. ಸಂಪೂರ್ಣ ಕಟ್ಟಡ ಬಾಡಿಗೆಗೆ ತೆಗೆದುಕೊಳ್ಳುವವರಿಗೆ ಮೊದಲ ಆದ್ಯತೆ.
**94805 51555**

**ಬೇಕಾಗಿದ್ದಾರೆ**
ಬೋಂದಾಡೆ ಎಂಟರ್‌ಪ್ರೈಸಸ್
ಟ್ಯಾಲಿ, ಅಕೌಂಟೆಂಟ್ ಕೆಲಸಕ್ಕೆ 2 ವರ್ಷ ಅನುಭವವುಳ್ಳ ಮಹಿಳೆ ಬೇಕಾಗಿದ್ದಾರೆ. ಸ್ಥಳ : 1334/1, ಹದಡಿ ರಸ್ತೆ, ತರಳಬಾಳು ಬಡಾವಣೆ, ದಾವಣಗೆರೆ 577005
**98869 77879, 98865 08965**

**ಅಡಿಕೆ ತೋಟ ಮಾರಾಟಕ್ಕಿದೆ**
ದಾವಣಗೆರೆಯಿಂದ 10 ಕಿ.ಮೀ. ಹತ್ತಿರವಿರುವ 5 ಎಕರೆ 2 ವರ್ಷದ ಅಡಿಕೆ ತೋಟ, 3 ಬೋರ್‌ವೆಲ್ ಮತ್ತು ಚಾನಲ್ ನೀರಿನ ವ್ಯವಸ್ಥೆಯಿದೆ. ಪ್ರತಿ ಎಕರೆಗೆ 50 ಲಕ್ಷ ರೂ. ಜೀನಿಯಸ್ ಸ್ಕೂಲ್ ಹತ್ತಿರ, ಹಿರೇತೊಗಲೇರಿ.
**82172 37969, 97413 48103**

**ಮಳಿಗೆ ಬಾಡಿಗೆಗಿದೆ**
ನರಸರಾಜ ರಸ್ತೆ ಹಾಸಬಾವಿ ಸರ್ಕಲ್ ಹತ್ತಿರವಿರುವ ಆಲದಹಳ್ಳಿ ಕಾಂಪ್ಲೆಕ್ಸ್‌ನಲ್ಲಿ 13x16 1/2 (Gold Shop, Cloth Shop, Medical Shop, Kirani Shop) ಅಳತೆಯ ಮಳಿಗೆ ಬಾಡಿಗೆಗಿದೆ.
ಸಂಪರ್ಕಿಸಿರಿ
**94801 75911**

**ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ**
ದಾವಣಗೆರೆ ಸುತ್ತಮುತ್ತ 50 (ಐವತ್ತು) ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ವಯಸ್ಸಿನ ಮಿತಿಯಿಲ್ಲ ಆಕರ್ಷಕ ಸಂಬಳ ಕೊಡಲಾಗುವುದು.
PF & ESI ಸೌಲಭ್ಯವಿರುತ್ತದೆ.
**91102 03348, 90352 10034**

**ಮನೆ ಬಾಡಿಗೆಗೆ/ಲೀಸ್‌ಗಿದೆ**
ಸರಸ್ವತಿ ಬಡಾವಣೆ, ಜಯನಗರ, ಶಿವಕುಮಾರಸ್ವಾಮಿ ಬಡಾವಣೆ, ಶಕ್ತಿ ನಗರ, ಆಂಜನೇಯ ಬಡಾವಣೆ, ಮಾಗಾನಹಳ್ಳಿ ಮೇನ್‌ರೋಡ್‌ಗೆ 10 ಗುಂಟೆ ಜಮೀನು ಮಾರಾಟಕ್ಕಿದೆ
**78997 60749, 99726 75759**

**ಸೈಟ್ ಮಾರಾಟಕ್ಕಿದೆ**
ಬಸವೇಶ್ವರ ಬಡಾವಣೆ 40x70 ದಕ್ಷಿಣ ನೇರ ಮಾಲೀಕರಿಂದ
ಸಂಪರ್ಕಿಸಿ :
**99023 71609**

**ಮನೆ ಬಾಡಿಗೆಗೆ ಇದೆ**
